ಹರಿಗೋಲು

ಮುಚ್ಚಿಮಲೆ

ಶಂಕರನಾರಾಯಣ ರಾವ್

ಪುತ್ತೂರು

1933.

ಪುತ್ತೂರು:
ಹರಿಹರ ಪ್ರೆಸ್, ಪುತ್ತೂರು.
1933.

ಮನವಿ

ಆಗಾಗ ಅಲ್ಲಲ್ಲಿ ಬರೆದ ಕೆಲವು ಕವಿತೆಗಳಿವು; ಇವುಗಳನ್ನು ನನ್ನ ಮಿತ್ರರಲ್ಲೊಬ್ಬರಾದ ಪುತ್ತೂರು ಹ್ಯಾಸ್ಕೂಲಿನ ಕರ್ಣಾಟಕ ಪಂಡಿತರೂ ಕನ್ನಡದ ಹೊಸ ಹಾದಿಯ ಬೆಡಗನ್ನು, ಎಲ್ಲಾ ವಿಧದಿಂದಲ್ಲದಿದ್ದರೂ ಹಲವು ವಿಧದಿಂದ, ಕೊಂಡಾಡುವವರೂ ಆದ ಶ್ರೀಮಾನ್ ಕೆ. ಶಂಭುಶರ್ಮರಿಗೆ ತೋರಿಸಿದೆ. ಅವರು ಪ್ರೀತಿಪೂರ್ವಕವಾಗಿ ಓದಿ ನೋಡಿ ಕೆಲವು ತಿದ್ದುಪಡಿಯ ಸಲಹೆಗಳನ್ನು ಕೊಟ್ಟು, ತಿದ್ದಿಸಿ, ಇದನ್ನು ಅಚ್ಚು ಹಾಕಿಸಲೇ ಬೇಕೆಂದು ಒತ್ತಾಯಪಡಿಸಿದರು. ಅಂತೇ ಹರಿಹರ ಛಾಪಖಾನೆಯ ಮ್ಹಾಲೀಕರಾದ ಶ್ರೀಯುತ ಎಚ್. ಅನಂತ ಕಾಮತ್‌ರವರೊಡನೆ ಮಾತಾಡಿ ಅಚ್ಚುಹಾಕಿಸುವ ವ್ಯವಸ್ಥೆ ಮಾಡಲಾಯಿತು. ಪುತ್ತೂರಲ್ಲಿ ನಡೆಯತಕ್ಕ ದಸರಾ ಮಹೋತ್ಸವದ ಸ್ಮಾರಕವಾಗಿ ಇದನ್ನು ಪ್ರಕಟಿಸಲೇಬೇಕೆಂಬ ಹಟ ತೊಟ್ಟುದುದರಿಂದ, ಕೆಲಸವು ಅವಸರವಸರದಿಂದಲೇ ನಡೆಯಿತು.

ಇದರಲ್ಲಿರುವ ಕವನಗಳಲ್ಲಿ ಒಂದೆರಡು, ಸರಿ ಭಾಷಾಂತರವಲ್ಲದಿದ್ದರೂ ಭಾಷಾಂತರದ ರೂಪವನ್ನು ಪಡೆದವುಗಳು. ಅಲ್ಲಲ್ಲಿ ಕೆಲವು ಕಡೆಗಳಲ್ಲಿ ಇಂಗ್ಲಿಷ್ ಕವಿತೆಗಳೊಳಗಣ ಭಾವನೆಗಳ ನೆರಳಿನ ಬೆಳವಣಿಗೆಯು ಕಾಣಿಸದೆ ಇರಲಿಕ್ಕಿಲ್ಲ. ಅಂತು ಈ ಕವನಗಳಲ್ಲಿ ಭಾವನೆಗಳಿಗೂ ಸರಳ ಶೈಲಿಗೂ ಹೆಚ್ಚಿನ ಗಮನಕೊಟ್ಟಿರುತ್ತೇನೆ. ಕನ್ನಡದ ಹೊಸ ಹಾದಿಯ ಅಂದ ಚಂದ ಬೆಡಗುಗಳನ್ನು ಮನಸಾರೆ ಕಂಡು, ಅದರ ಸೊಗಸಿನ ರುಚಿಯನ್ನು ಅನುಭವಿಸಿದುದರ ಫಲವಾಗಿ ಹುಟ್ಟಿದ ಭಾವಗಳು ಈ ರೀತಿಯ ಪುಟ್ಟಪುಟ್ಟ ಕವನಗಳಾಗಿ ಪರಿಣಮಿಸಿದುವೆಂದೇ ಹೇಳಬೇಕಾಗಿದೆ.

ಕನ್ನಡದ ಹೊಸ ಹಾದಿಯ ವಾತಾವರಣದಲ್ಲಿ ಈ ಪ್ರಾಂತ್ಯವು ಅಡಿಯಿಡ ತೊಡಗಿ ಹೆಚ್ಚು ಸಮಯವಾಗಿಲ್ಲ. ಆದುದರಿಂದ ಇದೇನೋ

ಅಸಂಬದ್ಧ ಕುಕವಿತೆಗಳೆಂದು ತೆಗಳುವವರು ಇರಲಾರರೆಂದು ಹೇಳುವ ಧೈರ್ಯವಿಲ್ಲ. ಈ ಕವಿತೆಗಳಲ್ಲಿ ಏನೇನು ಬೆಡಗುಗಳಿವೆ ಏನೇನು ಹಾಳು ತೊಡಕುಗಳಿವೆ ಎಂದು ಹೇಳಿ ಹೊಗಳುವ ಅಥವಾ ತೆಗಳುವ ಭಾರವನ್ನು ರಸಿಕರಾದ ಓದುಗರ ಪಾಲಿಗೆ ಒಪ್ಪಿಸಿರುತ್ತೇನೆ. ಕನ್ನಡ ನಾಡಿನಲ್ಲಿ ಹುಟ್ಟಿ ಕನ್ನಡದ ಸೇವೆಯನ್ನು ಮಾಡಬೇಕೆಂಬ ಅದೊಂದು ಇಚ್ಛೆಯೇ ನನ್ನಿಂದ ಇಂಥ ಕೆಲಸಗಳನ್ನು ಮಾಡಿಸುತ್ತಿರುವುದಲ್ಲದೆ ಬೇರೆಯಲ್ಲ.

ಈ ಪುಸ್ತಕವನ್ನು ಆದಷ್ಟು ಅಂದವಾಗಿ ಅಚ್ಚು ಹಾಕಿಸಿ ಸಮಯಕ್ಕೆ ಸರಿಯಾಗಿ ಒದಗಿಸಿಕೊಟ್ಟ ಹರಿಹರ ಛಾಪಖಾನೆಯ ಮ್ಯಾನೇಜರಾದ ರಾ| ಎಚ್. ಅನಂತ ಕಾಮತ್ ಇವರ ಉಪಕಾರ ಸ್ಮರಣೆಯನ್ನು ಮಾಡುವುದು ನನ್ನ ಕರ್ತವ್ಯ. ಹಾಗೂ ಇದು ಕನ್ನಡಿಗರ ಆದರಕ್ಕೆ ಯೋಗ್ಯವಾದರೆ ಎಲ್ಲಾ ಪ್ರಯತ್ನಗಳು ಅಲ್ಪವೆಂದು ಭಾವಿಸಬಹುದಾಗಿದೆ.

ಇತಿ

ಕನ್ನಡಿಗರ ಸೇವಕ

ಗ್ರಂಥಕರ್ತ.

ಶ್ರೀಮುಖ ಸಂವತ್ಸರದ

ಪುತ್ತೂರು

ದಸರಾ ಮಹೋತ್ಸವದ

ಸ್ಮಾರಕವಾಗಿ

ಪ್ರಕಟಿಸಿದ

ಹರಿಗೋಲು

ಸಮರ್ಪಣೆ

ಈ

ಕವನ ಗೊಂಚಲನ್ನು

ನಿಃಸ್ವಾರ್ಥ ಬುದ್ಧಿಯಿಂದ

ನಾಡಿನ ಸೇವೆಮಾಡುತ್ತಿರುವ

ಶ್ರೀಮಾನ್

ಮೊಳಹಳ್ಳಿ ಶಿವರಾವ್

ಇವರ


ದಿವ್ಯ ಚರಣಗಳಲ್ಲಿ

ಭಕ್ತಿಪೂರ್ವಕ

ಸಮರ್ಪಿಸಿರುತ್ತೇನೆ.

ಗ್ರಂಥಕರ್ತ.

ವಿಷಯ ಸೂಚಿಕೆ



ನಿನ್ನ ಕರಗಳ ಅಮೃತ ಸ್ಪರ್ಶವಾದೊಡನೆ ನಾಂ
ಹೊಂದುವಾನಂದವದು ಈ ಎನ್ನ ಕಿರಿಯ
ಹೃದಯ ತಲದಲಿ ಹಿಡಿಯಲಾರದತಿ ಮಧುರತರ
ಸಂಗೀತ ನಾದವಿಂ ಹೊರ ಸೂಸುತಿಹುದು. (ಗೀತಾಂಜಲಿ.)

ಹರಿಗೋಲು

ಹರಿಗೋಲು

ತೇಲುತಿವೆ ಕಡಲಿನಲಿ ಎಷ್ಟೆಷ್ಟೊ ಹರಿಗೋಲುಗಳು:
[illegible]
ಮುನ್ನೀರು ತಗ್ಗುತಿದೆ ಕುಗ್ಗಿ;
ಅಬ್ಬರಿಸಿ ಉಬ್ಬುತಿದೆ ಹಿಗ್ಗಿ.

[illegible]
[illegible]
[illegible]
[illegible]
ಕೇಳಿದರೆ ಹೇಳುವವರಿಲ್ಲ;
ಹೇಳಿದರೆ ಕೇಳುವವರಿಲ್ಲ.

[illegible]
[illegible]
[illegible]
[illegible]
ಗೊಂದಲವೆ ಗೊಂದಲವು ಎಲ್ಲಾ;
[illegible]



ಹರಿಗೋಲು

ಹರಿಗೋಲು

ತೇಲುತಿವೆ ಕಡಲಿನಲಿ ಎನಿತೊ ಹರಿಗೋಲುಗಳು;
ಕಡಲೆದೆಯ ಸೀಳಿ, ಅಲೆಗಳ ನಡುವೆ ಅಲೆಯುತಿವೆ.
ಮುನ್ನೀರು ತಗ್ಗುತಿದೆ ಕುಗ್ಗಿ;
ಅಬ್ಬರಿಸಿ ಉಬ್ಬುತಿದೆ ಹಿಗ್ಗಿ.

ಬಿರುಗಾಳಿ ಸುಳಿಸುಳಿದು ಬೀಸುತಿದೆ ಬಿರುಸಿಂದ;
ಮೌನ ಸಂಗೀತವನು ಹಾಡುತಿದೆ ಆಕಾಶ.
ಹರಿಗೋಲು ನೂರಾರು ತೇಲುತಿವೆ ಹಾಯಿಳಿಸಿ.
ಚುಕ್ಕಾಣಿ ಹಿಡಿದವರು ಮೈಮರೆತು ಹಾಡುವರು.
ಕೇಳಿದರೆ ಹೇಳುವವರಿಲ್ಲ;
ಹೇಳಿದರೆ ಕೇಳುವವರಿಲ್ಲ.

ಎಲ್ಲಿಂದ ಹೊರಟಿಲ್ಲಿ ಹೋಗುವರೊ ತಿಳಿದಿಲ್ಲ;
ಗೊತ್ತು ಗುರಿ ಏನೆಂದು ಬಲ್ಲವರು ಯಾರಿಲ್ಲ.
ಹಲವು ಹರಿಗೋಲುಗಳು ಹಾಯಿಳಿಸಿದಾಗಲೇ,
ಮುಳುಗಿ, ಕಡಲಿನ ಬಸಿರ ಕತ್ತಲೆಯೊಳಡಗಿದವು.
ಗೊಂದಲವೆ ಗೊಂದಲವು ಎಲ್ಲಾ;
ಕೇಳಿದರೆ ಹೇಳುವವರಿಲ್ಲಾ.

ಹರಿಗೋಲು

ನೆರೆ ನಿಲುಕದಾಳ ಕೆಳಗಡೆ, ನೋಡೆ ಸುತ್ತು ಮು-
ತ್ತಲು ಕಣ್ಣುಬಲೆಗಟ್ಟಿಸುವ ನೀಲ ಜಲರಾಶಿ
ಬಳಸಿಹುದು: ಆದ್ಯಂತವಿಲ್ಲದಾಕಾಶ ಭಯ
ಭೀತಿಗಳ ಭೀಷಣದ ಜೋಡಾಗಿ ಮೆರೆಯುತಿದೆ.
ಒಗಟಾಗಿ ತೋರುತಿದೆ ಎಲ್ಲ:
ಏನೆಂದು ಹೇಳುವವರಿಲ್ಲ.

ಸೋಜಿಗದ ಪಯಣವಿದು: ಸೊನ್ನೆಯಲಿ ಸೊನ್ನೆಯನು
ಹಂಬಲಿಸಿ ಅರಸುತಿಹ ಸಾಹಸದ ಯತ್ನವಿದು:
ಮುರುಕು ಹರಿಗೋಲುಗಳ ನಂಬಿ, ಘೋರ್ಗರೆವ ಮು-
ನ್ನೀರ ದಾಟಲು ಹವಣಿಸುವ ಹುಚ್ಚು ಧೈರ್ಯವಿದು.
ತೇಲುತಿವೆ ಹಲವು ಹರಿಗೋಲು;
ಕೇಳುತಿದೆ ಬೊಬ್ಬಿಡುವ ಗೋಳು.

ಆನಂದ ದೇವತೆ

ಆನಂದ ದೇವತೆಯೆ; ಎಲ್ಲಿರುವೆ
ಬಾರಮ್ಮ!

ಅಪರೂಪ ನಿನ್ನಾಗಮನ ತಾಯೆ!
ಮನಸು ನೆನಪಿನ ರೆಕ್ಕೆ ಬಿಚ್ಚಿ, ಕಾ
ತರಿಸಿ ಕಳವಳಿಸಿ ಕನವರಿಸುತಿದೆ;
ಬಾರೊಮ್ಮೆ! ಬಾರಮ್ಮ!! ಬಾ ಬಳಿಗೆ.
ಹೃದಯ ಹಾತೊರೆಯುತಿದೆ;
ನಿನ್ನ ಬರವನೆ ಇದಿರು
ನೋಡುತಿವೆ ಕಣ್ಣುಗಳು.

ಪಗಲಿರುಳು ಹಲವಾಯ್ತು ನಿನ್ನ ಸುಳಿ
ವೇ ಇಲ್ಲ; ಎಲ್ಲಿ ಹೋಗಿಹೆ ದೇವಿ!
ನಿನ್ನ ಒಡನಾಟವನು ಬಯಸಿ ಅಲೆ
ದಲೆದಾಡಿ ತಳಮಳಿಸುತಿದೆ ಪ್ರಾಣ.
ನಿನ್ನ ಕುಣಿತವ ಕಾಣ
ಲೆಳಸಿ ಕಣ್ಗಳು ಕೊರಗಿ,
ಕುಂದಿಹವು ಬಡವಾಗಿ.

ನಿನ್ನ ಗಾನದ ಬಯಕೆಯಿಂದ ಕಿವಿ
ಬಾಯಾರಿ, ತಡಬಡಿಸುತಿದೆ ಸೊರಗಿ:
ಬಾರಮರ ಕೋಗಿಲೆಯೆ! ಹಾರಿ ಬಾ!!
ನಿನ್ನ ಸುಖಸಂಗೀತವನು ಹಸಿಸು.
ಬಾ ತಾಯೆ! ಬಿಡು ಮುಸಿಸು,
ತೋರಿ ದಯೆ ಕೊಡು ಮನಸು:
ಮನದ ಹುಚ್ಚಸು ಬಿಡಿಸು.

ಸುಖಿ ಜನರ ಸ್ನೇಹವನು ಮರೆತುಬಿಡು:
ಶ್ರೀಮಂತರೆಡೆಗೆ ಕಾಲಿಡಬೇಡ:
ಉಪಚರಿಸುವವರಿಲ್ಲ ಮಾನಿನಿಯೆ!
ಪ್ರಾರ್ಥಿಸುವ ದುಃಖಿಗಳ ಬಳಿಗೆ ಬಾ.
ಗುಡಿಸಲಿನ ಬಡಜನರು
ಓಲೈಸಿ ಬೇಡುವರು,
ಆದರಿಸಿ ಪೂಜಿಪರು.

ಸುರಲೋಕದಿಂದಿಳಿದ ನಿತ್ಯಮಂ
ಗಳೆ ಶಾಂತಿದೇವಿಯೆ ಕುಮಾರಿ, ಚಿರ
ಕಲ್ಯಾಣಿ! ಕೋಮಲ ಲತಾಂಗಿ ಪ್ರತಿ
ಭಾವಂತೆ! ಆನಂದ ದೇವತೆಯೆ!!
ಬಾರಮ್ಮ! ಬಾಯೆನ್ನ
ಹೃದಯ ಗುಡಿಸಲಿನೊಳಗೆ
ನೆಲೆ ನಿಲ್ಲು; ಬಾ ತಾಯೆ!!

ಕಗ್ಗಲ್ಲ ಕಾವ್ಯ

ಓ ಶಿಲಾಮಯ ದಿವ್ಯ ಕಾವ್ಯವೆ!
ಓ ಕಲಾಮಯ ಭವ್ಯ ಭವನವೆ!
ಓ ಮನೋಹರ ಕೀರ್ತಿಕುಂಜವೆ!
ಓ ಜಿನಾಲಯ ಪುಣ್ಯಪುಂಜವೆ!!

ತುಳುನಾಡ ನಡುವಿನಲಿ ಕಂಗೊಳಿಪ
ಬಯಲು ಸೀಮೆಯ ಮೂಡುಬಿದಿರೆಯಲಿ,
ಗಂಭೀರವಾಗಿ ರಾರಾಜಿಸುವೆ,
ತ್ರಿಭುವನ ಕಲಾತಿಲಕ ಸಮ್ರಾಟ!!

ಕನ್ನಡಿಗರೆದೆಯುಬ್ಬಿ,
ಜುಮ್ಮೆಂದು ಹೆಮ್ಮೆಯನು
ಸ್ಫುರಿಸುತಿಹ ಸಂಸ್ಕೃತಿಯ
ದೃಶ್ಯವಿದು!!

ಮಣ್ಣೊಡೆದು ಹುಟ್ಟಿ ಮೆರೆಯುವ ಅಣಬೆ
ಯಂತೆ ನೆಲದಿಂದಲೇ ಮೂಡಿ, ಕಂ
ಗೊಳಿಪ ಸುಂದರ ಶಿಲಾಕುಸುಮವೆಂ
ದೆಂಬ ಸಂದೇಹವನು ಹುಟ್ಟಿಸುತ,
ಕನ್ನಡಿಗರಭಿಮಾನ
ಕೆರಳಿಸುವ ದೃಶ್ಯವಿದು!!

ಕಾಳಿದಾಸನ ಸ್ಫೂರ್ತಿ, ಪ್ರತಿಭೆಗಳು
ಶಿಲ್ಪ ಕಲೆಯಲಿ ತುಂಬಿ ತುಳುಕುತಿಹ
ಕಗ್ಗಲ್ಲ ಕಾವ್ಯವಿದು; ಕನ್ನಡ ಕ
ಲಾದೇವಿ ಒಸಪಳಿದು ಸಿದ್ಧಿಸುವ
ವಿಶ್ರಾಂತಿ ಭವನವಿದು!
ಶೃಂಗಾರ ದೃಶ್ಯವಿದು!!

ಹಸುಗೂಸಿನೆಳ ಹೃದಯದಿಂದುಕ್ಕಿ,
ಹಿಗ್ಗಿ ತುಳುಕುವ ನಗೆಯ ತೆರದಿಂದ
ಎನ್ನ ಮನವನು ನಿಮಿಷದಲ್ಲಿ ಬ್ರ
ಹ್ಮಾನಂದ ಸೀಮಾಂತರಕ್ಕೊಯ್ದು
ಬೆರಗು ಗೊಳಿಸಿದ ಮುಗ್ಧ
ಮೋಹನವಿಡಾಯವಿದು!!

ಈ ಕಲಾ ವೈಯಾರ ವೈಚಿತ್ರ್ಯ
ಗಳಿಗಾವ ಕವಿಹೃದಯ ನೆಲೆವನಿಯೊ!
ಏನು ಸುಖದಾಯಕವೊ ಈ ನಿನ್ನ
ಸನ್ನಿಧಿಯ ಸಹವಾಸ ಸೌಭಾಗ್ಯ!
ಸಾವಿರ ಶಿಲಾಸ್ತಂಭ
ಗಳ ಮನೋಹರ ಬಸದಿ!!

ವಿವಿಧ ಚಿತ್ರವಿಚಿತ್ರ ಶಿಲ್ಪಕಲೆ
ಮೆರೆವ ತ್ರಿಭುವನತಿಲಕ ಶ್ರೀಚಂದ್ರ
ನಾಥ ಚೈತ್ಯಾಲಯಂ, ಕನ್ನಡ ಕ
ಲಾ ದೇವತೆಯ ನೃತ್ಯರಂಗವಿದು!
ಮೌನ ಸಂಗೀತ ತುಳು
ಕುವ ಶಿಲಾವೇಣುವಿದು!!

ಆವ ಶಿಲ್ಪಿಯ ಚಮತ್ಕೃತಿಯೊ ಇದು,
ಅಚ್ಚಳಿಯದೀ ಶಿಲಾ ಕಾವ್ಯಕೃತಿ!
ಈ ಶಿಲ್ಪ ಕವಿಯ ಕೈಬಲ್ಮೆಗೆಣೆ
ನಾ ಕಾಣೆನತಿನಿಪುಣನತಿಜಾಣ!!
ಅಳಿವಿಲ್ಲ ಈ ಕೃತಿಗೆ!
ಕಡೆ ಇಲ್ಲ ಕೀರ್ತಿಗೆ!!

ನವರಸಾಲಂಕಾರ, ನವಭಾವ,
ಮೌನದಿಂ ಹರಿದಾಡುತಿಹುದಿಲ್ಲಿ!
ಸ್ವರ್ಗೀಯ ಸೌಂದರ್ಯ, ಶಾಂತಿಯನು
ಕೈ ಹಿಡಿದು, ಒಡನಾಡುತಿಹುದಿಲ್ಲಿ!
ಸೌಂದರ್ಯ, ಶಾಂತಿಗಳ,
ಕಲ್ಯಾಣ ಸದನವಿದು!!

ತುಳುನಾಡ ಸಾಮ್ರಾಜ್ಯ ವೈಭವದ
ಶಿಖರವೀ ನೂತನ ಶಿಲಾಲಯವು!
ನಾಡಿನ ಕಲಾ ಪ್ರಪಂಚದ ಚರಮ
ರೇಖೆ ಈ ಕಗ್ಗಲ್ಲ ಕಾವ್ಯವಿದು!
ವೈಭವದ ಕೈಗೂಡು!
ಇದು ನಮ್ಮ ಚೆಲುಬೀಡು!!

ತುಳುನಾಡ ಸಾಮ್ರಾಜ್ಯ ಲಯವಾಯ್ತು,
ಅದರ ವೈಭವವೆಲ್ಲ ಹಾಳಾಯ್ತು;
ಸಾಮ್ರಾಜ್ಯಲಕ್ಷ್ಮಿಯ ಸಮಾಧಿ ಮಂ
ದಿರವಾಯ್ತು ಈ ವಿನೂತನ ನಿಳಯ!
ಇತಿಹಾಸವನ್ನೊರೆವ
ಕಗ್ಗಲ್ಲ ಗ್ರಂಥವಿದು!!

ನಿರ್ಜೀವಿಯಲ್ಲ, ಚಿರ ಜೀವಂತ
ಕಾವ್ಯವಿದು: ಚೈತನ್ಯ ಚಿಮ್ಮುತಿದೆ
ಈ ಚಂದ್ರನಾಥ ಚೈತ್ಯಾಲಯದಿ,
ಗೋಚರಿಸುತಿದೆ ದೇವಸಾನ್ನಿಧ್ಯ!!
ಸುಕಲಾ ವಿಲಾಸವೀ
ಕಗ್ಗಲ್ಲ ಕಾವ್ಯವಿದು!!!

ನೀನು

ಬಿರಿದ ಹೂವಿನ ಚೆಲುವಿ
ನೊರತೆಯಲಿ ಹರಿಯುತಿಹೆ:
ನಸುಗಂಪು ಹೊಯ್ಲಿನಲಿ ನಲಿಯುತಿರುವೆ.
        ಸುರಿಯುತಿಹೆ ಮಕರಂದ
        ಸರಿಗಳಲಿ ಸೊಬಗಿನಿಂ
        ಮೆರೆಯುತಿಹೆ ತಂಗಾಳಿಯಲೆಗಳಲ್ಲಿ!

ಮರದ ಕೊಂಬೆಯ ಮೇಲೆ
ಕರಿಯ ಕೋಗಿಲೆ ಕರೆವ
ಸರಸ ಸಂಗೀತದಲಿ ಹಾಡುತಿರುವೆ;
        ಮಿರುಗುವೆಳದಳಿರ ಹೊಸ
        ತರುಗಳೆಡೆಯಲಿ ನುಡಿಯು
        ವರಗಿಳಿಯ ಕಂಠದಲಿ ಸುಳಿಯುತಿರುವೆ!

ನೀಲ ಗಗನದಿ ಮೇಘ
ಮಾಲೆಯೆಡೆಯಲಿ ತೊಳಗಿ
ತೇಲುವ ಸುಧಾಂಶುಮಂಡಲವ ಸುತ್ತಿ,
        ಸಾಲಾಗಿ ಸಂಚಲಿಪ
        ಕೋಲು ಮಿಂಚಿನ ಬಳ್ಳಿ
        ಗಾಳಿಯುಯ್ಯಾಲೆಯೊಳಗೋಲಾಡುವೆ!

ಸುರಸದಿಂ ತುಂಬಿಗತಿ
ಯರಿವು ಹೃದಯದಿ ನೆರೆದು
ಸರಸರನೆ ಹಾಲುಕ್ಕುವಂತೆ ತುಳುಕಿ,

ಹರಿವ ಸಂಗೀತ ಸಾ
ಗರದಿಂಪಿನಾಲಾಪ
ತೆರೆಗಳಲಿ ಹರುಷದಿಂದೋಡುತಿರುವೆ!

ಇಳೆಯ ಸುಖದುಃಖಗಳ
ಕಳವು ಮರೆಮೋಸಗಳ
ತಿಳುವಳಿಕೆ ಬಾರದಿಹ ಕೈಗೂಸಿನಾ,
ಎಳದಳಿರ ಚೆಂದುಟಿಯ
ಸೆಳೆಗಳಲಿ ಕುಣಿವ ನಗೆ
ಯೊಲುಮೆ ಮುದ್ದಿನಮೋಹದೊಡನಾಡುವೆ!

ಲಲನೆಯರ ಚಂಚಲ ಸು
ಲಲಿತ ನೋಟಗಳಲ್ಲಿ
ಹೊಳೆವ ಮೋಹನ ಬೆಡಗಿನೊಳಗಡಗಿಹೆ:
ಎಳೆಯ ಮಕ್ಕಳ ತೊದಲು
ಮೆಲುನುಡಿಯ ಲಲ್ಲೆಗಳ
ಬಳಗದೊಳು ಬಿದ್ದೇಳುತೊಪ್ಪುತಿರುವೆ!

ಕರಗಿಸಲು ನವನೀತ
ಪರಿಮಳದ ಘೃತವಾಗಿ
ಪರಿಣಮಿಸುವಂತೆ ನಿಜಹೃದಯದೊಳಗೆ
ಇರುವ ನವ ಭಾವನೆಯೆ
ಕರಗಿ, ನವರಸವಾಗಿ
ಸುರಿವ ಕವಿ ಜಿಹ್ವೆಯಲಿ ಶ್ರುತಿವಿಡಿಯುವೆ!!

ಓರೆನೋಟದ ಮುಗುದೆ

ಕಡೆಯ ಕಣ್ಣ ಓರೆ ನೋಟ
ಮೊಡನೆ ಕೂಡಿ ಕುಣಿದು ಮೆರೆದು
ಬೆಡಗಿನಿಂದ ನೊಸಲ ಕುರುಳ
ಸುಳಿಯೊಳಾಡಿ ಸುಸುಳಿ ಸಲಿದು,
ಮುಗುಳು ನಗೆಯ ತೆರೆಯ ನಡುವೆ
ಮುಳುಗಿ ನೆಗೆದು, ಸರಿದು ಹರಿದು,
ತುಟಿಯ ಕೆಂಪಿನೊಡನೆ ಮಿಂಚಿ,
ಹೊಂಚುದೋರಿ, ಬಿನದ ಗೊಳಿಪ
ಮೋಹ ಲಹರಿಯೊಡನೆ ಎನ್ನ
ಮನವನೇಕೆ ಸೆಳೆವೆ — ಮುಗುದೆ!

*   *   *   *

ಮುಗುದೆ ನೀನು ಕೆಲಕೆ ಸರಿದು,
ಕುರುಳುಗಳನು ಮೇಲೆ ಸವರಿ,
ಸೆರಗನೆಳೆದು ಪ್ರೇಮಲತೆಯ
ಫಲಗಳಂತೆ ತೋರ್ಪಲಲಿತ
ಮುಗುಳು ಮೊಲೆಯನಡಗಿಸುತ್ತ,
ಸರಸದುಯ್ಯಾಲೊಳಗೆ ಬಗೆಯ
ಬಯಕೆಯರ್ಥಗಳನು ತೂಗಿ
ಪ್ರೇಮದೊಗಟನೊಂದು ಬರೆದು,
ಚಲಿಪ ಕಣ್ಣ ಹೊಳೆವ ಕಾಂತಿ

ಗಳನು ತಂತಿಗೊಳಿಸಿ ಮಿಡಿದು,
ಎದೆಯ ವೀಣೆಯಿಂದ ಮಧುರ
ಮೌನ ಗೀತೆಗಳನು ಸುರಿದೆ.

*   *   *   *

ಪೊಂತಗಾರ್ತಿಯೆನಲು ಸಲ್ಲ
ದಕಟ! ನಿನ್ನನೆಂತು ಕರೆವೆ!
ಎಳೆಯ ಹೆಣ್ಣು, ತುಂಬುಮೈಯ
ಬಾಲೆ ಚದುರೆ, ಚಪಲೆ ಅಬಲೆ!
ತಿಳಿದು ತಿಳಿಯದಂತೆ ತವ ನ
ವೀನ ಹಾವಭಾವಗಳ ವಿ
ಲಾಸ ವಿಭ್ರಮಾದಿ ಸಕಲ
ಮೋಹ ಜಾಲಗಳನು ಬೀಸಿ,
ಮಧುರ ಮಂದಹಾಸ ಸುಮಪ
ಸೊಬಗಿನಿಂದ ಕುಣಿಸಿ ಕುಣಿಸಿ,
ಪೆಂಪುವೆಸೆವ ಸಲ್ಮೆ ಸಿರಿಯ
ಇಂಪಿಸೊಂದು ಕೊಳಲನೂದಿ,
ಒಲವಿನೊಂದು ಕವಿತೆ ಹಾಡಿ,
ಓರೆನೋಟದಾಟದಿಂದ
ಮರುಳುಗೊಳಿಸಿ, ತಿಳಿಯದಂತೆ
ನಡೆದೆಯೆಲ್ಲಿ ಮನ್ಮನೋಹ
ರಾಂಗಿ! ಚಂಚಲಾಕ್ಷಿ ನೀರೆ,
ನೀಲ ನೀಳ ನಯನೆ!— ಮುಗುದೆ!!

ಬೆಡಗಿನ ಕೊಡಗು

ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ತರುಲತೆಗಳಿಂದ ಕಿಕ್ಕಿರಿದ ಗಿರಿ
ಶಿಖರಂಗಳತಿ ಹಿರಿಯವಾಗಿ ಕಾಣುತ, ಕಣ್ಗೆ
ತಪಲಿನಲೆಗಳ ಬಿಂಕವನು ತೋರುತಿಹವು,
ನೋಟಸಿಲುಕದಪಾರ ಗಂಭೀರ
ಸೌಂದರ್ಯ ಸಾಗರದಂತೆ ತೋರುತಿದೆ ಕೊಡಗು ನೋಡು!
ಕೋಟೆಯಾ ಬಳಿಯಲ್ಲಿ ನಿಂದೊಮ್ಮೆ ನಾಲ್ಕೆಸೆಯು
ನೋಡಿದರೆ, ಕಣ್ಗೆಸೆವ ಗಂಭೀರ ದೃಶ್ಯದಿಂ
ದಾ ಭೂಮಿ ವೀರರಸಕಾವಾಸವೆಂದೆನಿಸೆ,
ಬಗೆ ತುಂಬಿ, ಸ್ಫೂರ್ತಿಯುಂದುಕ್ಕುವುದು ಮೇರೆ ಮೀರಿ.
ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ಗಿರಿಯು ಬರಿಗಳು ಬಾಳೆ ಕಿತ್ತಳೆಯ ಫಲಗಳಿಂ
ಹಸುರೆಲೆಯು ಗಿಡಬಳ್ಳಿ ಪೊದರುಗಳ ಬಳಗದಿಂ,
ಹೊಲಗಳು ಸುವರ್ಣವರ್ಣದ ತೆನೆಯ ಕಳವೆಯಿಂ
ತುಂಬಿ, ಹೊಂಬಿಸಿಲಿನಾಲೋಕದಿಂದೆಸೆಯೆ, ಚಳಿ
ಹಿರಿದು ಮುದುರಿದ್ದು ಕವಿಹೃದಯದಾಳದಲಿ
ವಿದ್ಯುಚ್ಛಕ್ತ್ಯಾವಾಹದಾ ಸ್ಫೂರ್ತಿಯನು ಹುಟ್ಟಿಸುವ
ಸೊಬಗಿನಾ ದೃಶ್ಯವನು ಕಾಣುವಡೆ, ಚೆಲುವೀವ
ಗತ್ತುಗಾರಿನ ನಾಡು ಕೊಡಗನೇ ನೋಡವ್ವ ನಡೆದು.

ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ಎದೆಯೊಳಗೆ ಭಾವರಸಗಳ ಹುಟ್ಟಿಸುತ, ಮನಸಿ
ಸುಲ್ಲಾಸ ಸಂಸ್ಫೂರ್ತಿಯಿಂದ ನೆಲೆಗಾಣದಾ
ನಂದ ಕಾವೇರಿಯಾ ಹೊನಲಿನಲಿ ನಲಿದಾಡಿ
ಕೇಲಿಸುವ ಕೊಡಗು ತನ್ನೊಳು ತಾನೆ ಸರಸವಾಗಿಹ ಕವಿತೆ!
ವಿಶ್ವಕವಿ ವಿಧಿ, ರಚಿಸಿದೊಂದು ಶೃಂ
ಗಾರಪರ, ಪುಟ್ಟ ಚೆಲುಕವನವೀ ಕೊಡಗಯ್ಯ!
ಇನ್ನಿದನು ಕುರಿತು, ಬಣ ಬಣಗುಕವಿತೆಗಳೇಕೊ
ನಾನರಿಯೆ! ವಿಧಿಯ ಕವಿತೆಯನೋದು
ಕೊಡಗಿನಾ ಗಿರಿಶಿಖರದಲಿ ಮೆರೆವ ಅರಸನ ವಿ
ಹಾರ ವಾತಾವರಣದಲಿ ನೀನು ನಿಂದೊಂದು ನಿಮಿಷ!
ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ಕುಂದಿತೇ ಕೊಡಗಿನಲಿ ಧೈರ್ಯ ಶೌರ್ಯಗಳೆಂದು
ಬಗೆದು, ವೀರಶ್ರೀಯು ಮುಸುಕಿಟ್ಟು ಮೌನದಿಂ
ದುಪವಾಸ ವ್ರತದ ಸತ್ಯಾಗ್ರಹವನಾಚರಿಸಿ
ಕುಳಿತಂತೆ ತೋರುತಿವೆ ಗಿರಿಪರ್ವತಂಗಳಾಯೆಡೆಯೊಳೆಲ್ಲಾ!
ಕೊಡಗು ನಾಡಿನ ವಿಜಯ ಶ್ರೀವನಿತೆ, ವೈರಾಗ್ಯ
ವನು ತಳೆದು, ಘೋರತಪಗೈವ ಮಂದಿರದಂತೆ

ತೋರುತಿಹೆ, ಗಂಭೀರ ಗೌರವದೊಳೊಪ್ಪುತಿಹ
‘ಓಂಕಾರ’ ಗುಡಿ, ‘ಸಮಾಧಿಯ’ ಭವನಂಗಳಲ್ಲಿ!
ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ತುಳುನಾಡ ಮೂಡುಗಡಿ, ಪಡುವೆಟ್ಟ
ಗಳ ಮೇಲೆ ಮೆರೆವ ಮಲೆನಾಡದಾ ಕೊಡಗಿನಲಿ,
ವನದ ಸಿರಿ ವೈಭವಕೆ ಮನಸೋತು,
ನೆಲೆನಿಂದ ವನದೇವತೆಗಳೆಂಬ ಸಂದೇಹ
ಮನ ಹುಟ್ಟಿಸುತ, ನೋಟಕರ ನಯನ ಮನಸುಗಳ
ಸೊಮ್ಮೆಯೇ ಭ್ರಮೆಗೊಳಿಸಿ, ಸೆರೆವಿಡುವ
ಕೇದಗೆಯ ಬಣ್ಣ, ನವ ನವನೀತದಂತೆಸೆದು
ಹೊಳೆವ ನುಣುಪಾದ ಮೈಸಿರಿಯಿಂದ,
ಮುದ್ದು ಮೊಗದಲಿ ಕುಣಿವ ಕಣ್ಣುಗಳ
ಕುಡಿಮಿಂಚಿನಂತೆಸೆವ ಚೆಳ್ವೆಳಗಿನಿಂದ, ರಸ
ತುಂಬಿ ಬೀಗಿದ ಪ್ರೇಮ ಫಲದಂತೆ
ತೋರ್ಪ ಚೆಂದುಟಿಯಿಂದ, ರಮಣೀಯವಾಗಿ ಸುಮ
ನೋಹರಾಂಗಿಯರಾದ ಕೊಡಗು ನೀರೆಯರೆಲ್ಲ
ಸಡಗರದಿ ನಾಡಿನುಡುಗೆಯ ಧರಿಸಿ, ವೈ
ಯ್ಯಾರದಿಂ ದಿಗಿಲುಗೊಳಿಸುವರಲ್ಲಿ ನೋಡು ಗೆಳೆಯ!!

ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ಸೌಂದರ್ಯದಧಿದೇವಿ, ಮನಮುಟ್ಟಿ ಮೌನದಲಿ
ನರ್ತಿಪ ವಿಹಾರನೆಲವೀ ಕೊಡಗು ನೋಡಯ್ಯ!
ಪ್ರಕೃತಿ ಕವಯಿತ್ರಿ ತಾನಚ್ಚಳಿಯದಿಹ ಸರಸ
ಕವಿತೆಗಳ ಸುಂದರ ಸಮಾಧಿಯನೆ ಗಿರಿಶಿಖರ
ತಪ್ಪಲುಗಳಲ್ಲಿ ರಚಿಸುತ್ತಿರುವ, ಪುಣ್ಯನೆಲ
ಏ ನಾಡು! ಕರುನಾಡು! ಕೊಡಗು!! ಕೊಡಗರ ಬೀಡು!!!
ಪಡುವೆಟ್ಟಗಳನೇರಿ ನೋಡದರ ಸಡಗರದ ಬೆಡಗ.
ಏನು ಬೆಡಗಿನ ಕೊಡಗಿದು!
ಏನು ಕೊಡಗಿನ ಬೆಡಗಿದು!!

ಎಲ್ಲಿರುವೆ ಹಾ! ಎನ್ನ ಮನದನ್ನೆ!!

ಎಲ್ಲಿರುವೆ ಹಾ! ಎನ್ನ ಮನದನ್ನೆ!
ಎಲ್ಲಿರುವೆ ಸೌಭಾಗ್ಯ ಸಂಪನ್ನೆ!!
ತಲ್ಲಣವಗೊಳಿಸಿ ಮಮ ಮನವನೀ
ನೆಲ್ಲಿ ದಿವ್ಯಜ್ಯೋತಿಯೊಳಗೈಕ್ಯೆಯಾದೆ!

ಬೆಳೆ ಕಳೆದ ಹೊಲದಂತೆ, ಜಲವಿಳಿದ
ಕೊಳದಂತೆ, ಕಂಪಳಿದ ಸುಮದಂತೆ,
ಒಲುಮೆಯಿಲ್ಲದ ಹೃದಯದಂದದಲಿ
ನಿಳಯವಿದು ತೋರುತಿದೆ, ನೀನಿಲ್ಲದೆನಗೆ;

ಸುಳಿಯದಿದೆ ಗೃಹದೊಳಗೆ ನಿನ್ನೊಲವು,
ನಲಿಯದಿದೆ ಸುಖಮೂರ್ತಿ ನನ್ನೊಡನೆ;
ಚಲಿಸದಿದೆ ವಿನಯಗೂಡಿದ ನಯನ
ಗಳ ಕಾಂತಿ, ಮಿಂಚದಿದೆ ನವಿನುಡಿಯ ನಗೆಯು.

ಬರಿದಾಗಿ ತೋರುತಿದೆ ಪ್ರಕೃತಿ, ನೆರೆ
ಹೊರೆಯೆಲ್ಲ ಏನಿಲ್ಲದಂತಿಹುದು;
ಬಿರುಗಾಳಿ ಬೀಸುತಿದೆ ದೇಹದಲಿ,
ಮರುಭೂಮಿಯಂತೆ ಮರಮರಿಸುತಿದೆ ಹೃದಯ.

ಸುಳಿವೆತ್ತ ಕಾಲಮಡುವಿನ ನಡುವೆ
ಸಿಲುಕಿ ತನ ಲಲಿತ ತನುಲತೆ ಮುಳುಗಿ
ಅಳಿದು ಹೋಯಿತು. ನೀನು ಪರಿಮಳಿಸಿ
ದೊಲವಿನಾ ಸುಮ ಬಾಡದಿದೆ ಎನ್ನ ಮನದಿ.

ಕಲ್ಲೆದೆಯ ಪಾಪಿ, ಕಣ್ಮುಚ್ಚಿ ಪಾ
ತಿಲ್ಲದತಿ ದುಗುಡದಲಿ ಕುಳಿತಿರಲು;
ಮೆಲ್ಲಮೆಲ್ಲನೆ ನಿನ್ನ ನೆನವರಿಕೆ
ಕಲ್ಲೆದೆಗೆ ಬಡಿಯೆ ಇಗೊ! ಬಿರಿಯುತಿದೆ ಹೃದಯ!

ಮನದ ಸುಖಶಾಂತಿಗಳನಪಹರಿಸಿ
ಮನದನ್ನೆ ನೀನೆತ್ತ ಮರೆಯಾದೆ!
ನೆನಹಿನೊಳು ನೆನೆವೆ ನಿನ್ನನೆ ನಿತ್ಯ
ಕನಸಿನೊಳು ನಿನ್ನನಲ್ಲದೆ ಬೇರೆ ಕಾಣೆ.
ಅಲೆಯುತಿದೆ ನೋಟ, ಕಿವಿ ಕೊರಗುತಿದೆ
ತಳಮಳಿಸಿ ಪ್ರಾಣ, ಕುಂದಿದೆ ತ್ರಾಣ;
ಕಳವಳಿಸಿ ಮನಕರಗಿ ನೀರಾಗಿ
ಗಳಗಳನೆ ಸುರಿಯುತಿದೆ ಕಣ್ಣೀರಧಾರೆ!

ಕಡುನೇಹದಿಂದೆನ್ನ ಹೃದಯವನು
ಸಡಗರದಿ ತೊಳೆದು, ನೀಂ ಪ್ರೇಮದಾ
ಸೊಡರ ಬೆಳಗುತ ಕಡೆಗೆ ಶೋಕಾಗ್ನಿ
ಗೆಡೆಗೊಳಿಸಿ ನೀನೆತ್ತ ನಡೆದೆ ಹಾ! ಲೀಲೆ!!
ಬಗೆಬಗೆಯ ಬಯಕೆಗಳ ಸಂಪದವ
ಬಗೆದು, ಮನಮುರಿದು ಪಂಜರದಿಂದ
ನೆಗೆದು ಹಾರುವ ಹಕ್ಕಿಯಂತೆ ನೀ
ನಗಲಿದೆಯ! ನಿತ್ಯಸುಖಶಾಂತಿಯನು ಬಯಸಿ.

ಒಲಿದ ಪ್ರೇಮದಿ ನಲ್ಲನೆಂದು ನೀ
ನೊಲವಿನಿಂದಾರಾಧಿಸುತ ನಂಬಿ
ನಲಿದೆ ನಿರ್ಮಲ ಚಿತ್ತದಿಂದದಕೆ
ಲಲಿತಾಂಗಿ! ಕೊಡುವೆನಿಗೊ!! ಕಣ್ಣೀರಧಾರೆ!!

ಕಮ್ಮಾರ

ಅಲ್ಲಿ ನೋಡರಳಿ ಮರದಡಿಯಲ್ಲಿ
ಗೇಯುವವ ನಮ್ಮೂರ
ಕಮ್ಮಾರನವನು.
ಕಲ್ಲೆದೆಯ ದಿಂಡಾಳು, ಬಲಯುತನು,
ಗುಜ್ಜುಗೊರಲಿನ ಭೀಮ
ನಂತೆ ಕಾಣುವನು.

ಉಬ್ಬಿ ಕೊಬ್ಬಿದ ತೋಳುಗಳ ಮಾಂಸ
ಖಂಡಗಳು ಕಬ್ಬಿಣದ
ಬಿಣ್ಪೆನಂತಿಹವು.
ಹುರುಪು ಲವಲವಿಕೆ ತುಂಬಿದ ಮುಖದಿ
ಮಿರಿಯುತಿದೆ ಗೌರವದ
ಗೈಮೆಯುತ್ಸಾಹ.

ಇಂಬಾಗಿ ಬಾಗಿರುವ ಹುಬ್ಬುಗಳು
ಗೈಮೆಯ ಪವಿತ್ರ ಬೆವ
ರಿಂದ ತೊಯ್ದಿಹವು.
ಬೆವರಿಳಿಸಿ ದುಡಿದು ಜೀವಿಪೆನೆಂಬ
ಸ್ವಾತಂತ್ರ್ಯ ಗೌರವದಿ
ತಲೆ ಎತ್ತುತಿಹನು.

ಆಸುದಿಸವು ಮುಂಜಾಸೆಯಿಂದ ಸಂ
ಜೆಯು ತನಕ, ಬಗಬಗನೆ
ಉರಿಯುತಿದೆ ಕುಲುಮೆ.
ಬಿಸಿರಕ್ತ ಧಮನಿಯಲಿ ಹರಿಯುತಿದೆ
ಧುಮುಧುಮೂ, ಧುಮುಧುಮೂ,
ಬಿಸಿಧಮನಿಯೊಳಗೆ.

ಧುಮುಧುಮನೆ ಹರಿವ ಬಿಸಿ ರಕ್ತವಸು
ಜೀವನದ ಗೌರವಕೆ
ಬುಸುಬುಸನೆ ಕುದಿಸಿ,
ಕಾಯಕಷ್ಟದ ಕುಲುಮೆಯಲಿ ತನ್ನ
ಜೀವನವ ಪುಟವಿಡುವ
ಕರ್ಮಾರನಿವನು.

ಹೂ

ಅರಳಿ ನಲಿದಾಡಿ ನಡ
ಗರದಿ ಮೆರೆಯುವ ಹೂವೆ
ನಸುನಗುವ ನಿನ್ನ ವೈ
ಖರಿಯಾವದೆಂ! ಬೆಡಗದೇಂ!!

ನಿನ್ನಲ್ಲಿ ಮಾಧುರ್ಯ
ಸೌಂದರ್ಯ ಲಾವಣ್ಯ
ವಿಹುದಿನಿದು ಮಧುವಿಹುದು;
ಪರಿಮಳದ ಸಿರಿಯಿಹುದು.

ಬೆರಗುಗೊಳಿಸುವ ಹಾವ
ಭಾವಗಳ ಭಂಗಿ, ಮುಗು
ದೆಯ ಲಜ್ಜೆ, ಸಂಚಲಿಪ
ಕೋಲ್ಮಿಂಚಿನೆಸಕವಿದೆ.

ಪ್ರಕೃತಿದೇವಿಯ ಮುದ್ದು
ಕುವರಿ ನಿರ್ಜರೆಯಂತೆ
ಮೆರೆಯುತಿಹೆ; ಸೊಬಗು ಶಾಂ
ತಿಯು ಮೂರ್ತಿಯಂತಿರುವೆ.

ಈ ಸಕಲ ವೈಭವ ವಿ
ಲಾಸಗಳ ಕಳೆದೊಂದೆ
ನಿಮಿಷದಲಿ ಕಳಗುಂದಿ
ಏಕೆ ಬಾಡುವೆ ಹೂವೆ!!

ಅರೆಗಳಿಗೆಯೇ ನಿನ್ನ
ಜೀವನದ ಅವಧಿಯೇ!
ಅದಕಾಗಿ ನೀ ಹುಟ್ಟಿ
ಪರಿಮಳಿಸಿ ಬಾಡುವೆಯು!!

ಜಗದೊಳಗೆ ನಗುತ ಸಂ
ತಸದಿಂದ ಚಿರಕಾಲ
ಬಾಳಿ, ಜೀವನದ ಸುಖ
ಸವಿಯಬಾರದೆ ಹೂವೆ!

ನಿನ್ನ ಚರಿತೆಯು ನೋಡಿ
ಬೆರಗಾದೆ ನಾನಯ್ಯೊ;
ನೆಲೆಗಾಣದಿಹುದೆನ್ನ
ಯೋಚನೆಯು ಕುಸಿಯುತಿದೆ.

ವಿಧಿಲೀಲೆಯನು ಬಣ್ಣಿ
ಸುವ ಚಿತ್ರ ಲಿಪಿಯೊನೀಂ;
ನಿನ್ನ ಜೀವನಚರಿತೆ
ವೇದಾಂತ ಗ್ರಂಥವದು!

ಬಡತನ

ನಡೆ ಎನ್ನ ಬಳಿಯಿಂದ ಬಡತನವೆ!
ತೊಲಗತ್ತ ದಾರಿದ್ರ್ಯ ಹೆಣರಂಡೆ!!
ಬಾಲ್ಯದಿಂ ಬೆನ್ನು ಬಿಡದೆನ್ನ ನೀಂ
ಹಿಂಬಾಲಿಸುತ್ತಿರುವೆ: ಸಾಕು, ಬಿಡು
ನಡೆ ದೂರ, ಇಲ್ಲ ನಾಚಿಕೆ ನಿನಗೆ;
ಲಜ್ಜೆ ಮೊದಲೇ ಇಲ್ಲ, ಜೀವನದ
ಗೊತ್ತುಗುರಿ ಏನೆಂಬ ತಿಳಿವಿಲ್ಲ.
ಹೀನ ಕುಲದಲಿ ಹುಟ್ಟಿ, ಹೀನರೊಡ
ನಾಟದಲಿ ಬೆಳೆದ ನಿನಗೆನ್ನಲ್ಲಿ
ಆಶ್ರಯವೆ! ಮತಿ ಇಲ್ಲ, ಗತಿ ಇಲ್ಲ,
ನೆಲೆ ಇಲ್ಲ, ಕುಲವಿಲ್ಲ; ಬಾರೆಂದು
ಕರೆದು ಮನ್ನಿಸಿ ಮಾತನಾಡಿಸುವ
ಜನರಿಲ್ಲ; ಜಗದಲ್ಲಿ ನಿನ್ನವರು
ಯಾರಿಲ್ಲ: ಬಂಧುಬಾಂಧವರಿಲ್ಲ;
ತಂದೆತಾಯಿಗಳಿಲ್ಲ: ತಾಯ್ನಾಡು
ನಿನಗಿಲ್ಲ; ಹಿತವ ಬಯಸುವರಿಲ್ಲ.

ಹಿಗ್ಗಿ ಕಗ್ಗತ್ತಲೆಯು, ವಿಶ್ವವನು
ನುಂಗಿರ್ದ ನಡುವಿರುಳಿನಲಿ, ಭೂತ
ಪ್ರೇತಗಳ ವ್ಯಭಿಚಾರದಿಂದಾದ
ನಿನಗೆನ್ನೊಳಾಶ್ರಯವೆ! ಸಾಕು, ಬಿಡು

ದೂರ ನಡೆ, ಹೆಂಡ ಕುಡುಕರ ನೀಚ
ಗೆಳೆತನವ ಹುಡುಕು; ಬಡ ಗುಡಿಸಲಿನ
ಹೊಲಸು ಚಾಂಡಾಲರಲಿ ನೆಲೆಯಾಗು.
ವ್ಯಭಿಚಾರಿ ಮೋಣ್ ಜೂಜುಗಾರರನು
ಸೇರಿ ಸ್ನೇಹದಿ ಬಾಳಿ ಬದುಕಲ್ಲಿ;
ನಿರ್ಜನಾರಣ್ಯದಲಿ ವನವಾಸ
ದಿಂದ ದಿನಗಳೆಯುತಿರು; ಹಿಮಗಿರಿಯ
ಗುಹೆಯೊಳಗೆ ಅವಿತು ಅಜ್ಞಾತವಾ
ಸವ ಮಾಡು; ನಿನಗದುವೆ ಯೋಗ್ಯನೆಲೆ.

ದಿನ, ಮಾಸ, ವರುಷಗಟ್ಟಲೆಯಾಯ್ತು
ಎನ್ನ ಬಳಿಗೈತಂದು, ಕದಲದೇ
ಬೇರೂರಿದಂತಿರುವೆ; ಅತಿಥಿ ಎಂ
ದೂಹಿಸುತ ಎಡೆಗೊಟ್ಟೆ: ಇಲಿಯಂತೆ
ಬಂದೆನ್ನ ಮರೆಹೊಕ್ಕ ಧೂರ್ತೆ ಹೆ
ಬ್ಬುಲಿಯಂತೆ ಕಾಡುತಿಹೆ! ಕೊಲೆಯಂತೆ
ಬಾಧಿಸುವೆ! ನೀನೆನ್ನ ಜೀವನಕೆ
ಹಿಡಿದ ಬದನಿಕೆಯಾದೆ; ಈ ನಿನ್ನ
ಸಹವಾಸದಿಂದೆಲ್ಲ ನೆಂಟರಿ
ಷ್ಟರು ದೂರ ಸರಿದಿಹರು; ಸುಜನರೊಲ
ವೇ ಇಲ್ಲದಂತಾಯ್ತು! ಅಪಮಾನ,

ಸಿಂದೆಗಳ ಹೊರೆಹೊತ್ತು ಜಸವಳಿದು
ಜಿಂಡಾದೆ: ಹಾಳು ಮಾಡಿದೆ ಎನ್ನ.
ಬಾಳುವೆಯು ಗೌರವದ ಶುಭ್ರತೆಗೆ
ಮಸಿ ಚೆಲ್ಲಿ, ಮಣ್ಣುಗೂಡಿಸಿಬಿಟ್ಟೆ.

ಸತ್ಕುಲೀನನು ನಾನು, – ಹೆಚ್ಚೇಕೆ—
ನಿನ್ನ ಸಹವಾಸದುಪಕಾರವಿದೊ!
ಬಹಳವಾಯ್ತೆನ್ನಲ್ಲಿ! ಬೆಳಕು ಕ
ತ್ತಲೆಯಾಯ್ತು; ಹೊನ್ನು ಕಲ್ಮಣ್ಣಾಯ್ತು.
ಸಾಕಾಯ್ತು, ತಡೆಯಲಾರೆನು ಇನ್ನು:
ಹೊರಡೆನ್ನ ಬಳಿಯಿಂದ, ನಡೆ ಬೇಗ.
ಬಾರಮ್ಮ! ಭಾಗ್ಯಲಕ್ಷ್ಮಿಯೆ ನೀನು!!
ಕಾದಿಹೆನು ನಿನಗಾಗಿ ನಾನಿಲ್ಲಿ;
ನಿನ್ನಧರದಿಂದ ಸುರಿವಮೃತ ಚುಂ
ಬನದ ಲೇಪನದಿಂದ ತಣಿಸೆನ್ನ
ಜಿಂದ ಮನವನು; ಬೇಗ ಬಾರಮ್ಮ!!

ನಿನ್ನ ನಗು

ನಿನ್ನ ನಗೆಯ ಸೋನೆಯೊಳಗೆ
ಸುಖದ ಮೂರು ಲೋಕವೆನಗೆ
ಅಡಗಿದಂತೆ ತೋರುತಿಹುದು;

ನಿನ್ನ ನಗೆಯು
ಕುಣಿವ ಬಗೆಯು,
ನುಗ್ಗಿಯೆನ್ನ ಹೃದಯ ತಲದಿ
ಹಿಗ್ಗಿ ತಾಳತಪ್ಪಿ ಮುದದಿ,
ಸ್ವೇಚ್ಛೆಯಿಂದ ಹರಿಯುತಿಹುದು.

ನಿನ್ನ ಬಗೆಯ
ಮುಗುಳು ನಗೆಯ
ಬೆಳಕಿನಲ್ಲಿ, ಎನ್ನ ಮನಸು
ಕಾಣುತಿಹುದು ಕವಿಯ ಕನಸು:
ಸರಸ ಗೀತೆಯುಸುರುತಿಹುದು!

ಮನದ ಬಯಕೆ,
ಹೃದಯ ತಳಕೆ,
ನಗೆಯ ತಂತಿಯಲ್ಲಿ ಹರಿದು
ಸರಿದು ಬಂದು, ಕುಣಿದು ತಣಿದು,
ಎನ್ನ ಅಚಲ ಪ್ರೇಮವನ್ನು
ಸೆರೆಯ ಹಿಡಿದು
ಜಿಗಿಯುತಿಹುದು;

ನಿನ್ನ ನಗೆಯ ಹೊಸಲಿನಲ್ಲಿ
ಇಹುದು ಶಕ್ತಿ!
ಬಹುದು ಮುಕ್ತಿ!!

ಮಾತಿನ ಗೋಪುರ

ಮಾತಿನ ಗೋಪುರ ಕಟ್ಟುವರು
ವರಕವಿ ಶಿಲ್ಪಿಗಳು!

ಬಾನೊಳು ಗಾಳಿಯು
ತಳಹದಿಯಲ್ಲೀ,
ಪ್ರತಿಭೆಯು ಕೊರೆದು,
ಸ್ಫೂರ್ತಿಯು ಸಿಗಿದು,
ಕಲೆಯುನು ಕಡಿದು,
ವಿಶ್ವ ದಿಗಂತದಿ
ವಿಸ್ಮಯಗೊಳಿಸುವ
ಮಾತಿನ ಗೋಪುರ ಕಟ್ಟುವರು!

ಕಾಲಕೆ ಮಾಸದ
ಕುಂದಣ ಚಂದ್ರನ
ಅಮೃತದ ಶಿಲೆಯುಲಿ,
ಚಿತ್ರ ವಿಚಿತ್ರದ,
ಕಂದದ ಕುಂದದ
ಕಲ್ಪನೆಯಿಂದಲೆ

ಶಾಶ್ವತ ಬಾಳುವ
ಬೆಡಗಿನ ಜೀವಿತ
ಮಾತಿನ ಗೋಪುರ ಕಟ್ಟುವರು!

ಗೋಪುರ ಕಟ್ಟಿ,
ಕೀರ್ತಿಯ ಧ್ವಜದಲಿ
ನೀತಿಯ ಕೆತ್ತುವ
ಶಿಲ್ಪಿಗಳಿವರು!

ಬಯಲಿನ ಸುಡಿಯಲಿ
ರಸವನು ತುಂಬುವ
ಯೋಗಿಗಳಿವರು!

ಸತ್ತರು ಜೀವಿಸಿ
ಮೆರೆಯುವ ರಸಿಕರು
ವರ ಕವಿ ಶಿಲ್ಪಿಗಳಿವರು!!

ಕನ್ನಡ ನಾಡು

ನಮ್ಮ ನಾಡಿದು! ನಮ್ಮ ನಾಡಿದು!!
ನಮ್ಮ ಕನ್ನಡ ನಾಡಿದು!!!
ನಮ್ಮನಾಡಿಸಿ ಸಲಹಿ ಬೆಳೆಸಿದ
ತಾಯಿ ನಾಡಿದು ನಮ್ಮದು!
ಧರ್ಮ ಕರ್ಮದ ಪುಣ್ಯಕ್ಷೇತ್ರವು,
ಕ್ಷಾತ್ರ ತೇಜದ ನಾಡಿದು!
ಆತ್ಮಶಕ್ತಿಯ ಜ್ವಲಿಸಿ ಮೆರೆಸಿದ,
ಸ್ವಾಭಿಮಾನದ ಬೀಡಿದು!
ನಮ್ಮ ಕನ್ನಡ ನಾಡಿದು!
ನಮ್ಮ ಹಿರಿಯರ ನೆಲೆ ಇದು!
ನೆಮ್ಮದಿಯ ತವರೂರಿದು!!

ಯಾರು, ಮಲ್ಲಿಗೆ ಜಾಜಿ ಸಂಪಿಗೆ
ಸುಮವ ನಿತ್ಯವು ಮುಡಿವಳೊ;
ಯಾರು, ಧಾನ್ಯದ ಪೈರುಪಚ್ಚೆಯ
ಸೊಬಗು ಸೀರೆಯನುಡುವಳೊ;
ಯಾರು, ತೆಂಗಿನ ಕಂಗು ಬಾಳೆಯ
ಹೊಳೆವ ಮೇಲುದನೆಳೆವಳೊ;
ಯಾರು, ಗಂಧ ಪುನುಂಗು ಚಂದನ
ತಿಲಕ ನೊಸಲೊಳಗಿಡುವಳೊ;
ಅವಳೆ ಪೂಜ್ಯೆ ಪುನೀತೆಯು!
ಅವಳೆ ಧನ್ಯೆಯು ಮಾನ್ಯೆಯು!
ಅವಳೆ ಕನ್ನಡ ಮಾತೆಯು!!

ಕರಿಯ ಕೋಕಿಲ ಕೊರಳ ಕೊಳಲಿಂ
ದುದಯರಾಗವ ಸೂದಿಸಿ,
ಗಿರಿಯ ಜರಿಯುಲಿ ಸರಸ ಮಧುರಾ
ಳಾಪಗೀತವ ಹಾಡಿಸಿ,
ಮರದ ಚೆಲುವಿನ ಸೋಗೆ ನವಿಲನು
ನೃತ್ಯಲಾಸ್ಯದಿ ಕುಣಿಸುವ,
ಪರಮ ಮಂಗಳ ದೇವಿ ರಾಜೇ
ಶ್ವರಿಯವೊಲು ಮೆರೆಮೆರೆಯುವ
ಇವಳೆ ಕವಿಗಳಿಗಾಶ್ರಿತೆ!
ಇವಳೆ ಸಕಲ ಕಲಾನ್ವಿತೆ!
ಇವಳೆ ಸುರ ಸನ್ಮಾನಿತೆ!!

ಶೂರ ಕುವರರ ತೊಟ್ಟಿಲೊಳಗಿ
ಟ್ಟಾರು, ಜೋಗುಳ ಹಾಡುತ,
ಭೂರಿ ಸಾಹಸ ಧೈರ್ಯ ಶೌರ್ಯವ
ಧಮನಿಯೊಳು ನೆರೆ ಸುರಿದಳೊ;
ವೀರ ರಮಣೀ ಕುಲದ ಪಾತಿ
ವ್ರತ್ಯಕಾರ್ ಕಲೆ ಕೊಟ್ಟಳೊ;
ಯಾರ ಮಡಿಲಲಿ ಸಾಧುಸಂತರು
ಜ್ಞಾನ ಕ್ಷೀರವ ಕುಡಿದರೊ;
ಇವಳೆ ಅವಳಾ ದಾನಿಯು!
ಅವಳೆ ಇವಳೀ ಜ್ಞಾನಿಯು!
ಇವಳೆ ಕನ್ನಡ ಜನನಿಯು!!

ಯಾರ, ಸಿರಿ ವೈಯಾರ ತರುವಿನ
ಕುಸುಮ ರತ್ನಾವಳಿಯನು
ಸೂರೆಗೈದರು ಪರರು, ಹೊಸ ಬಿಡ
ಗೆಲ್ಲಿ ನಿತ್ಯವು ಮೆರೆವುದೊ;
ಕ್ಷೀರ ಭೂಮಿಯೊಳೆಲ್ಲಿ ಪುಣ್ಯಾ ಸ
ದೀಸದಂಗಳು ಹರಿವವೊ;
ಚಾರು ನಿರ್ಮಲ ಕೊಳದ ನೀರೊಳ
ಗೆಲ್ಲಿ ಮೌಕ್ತಿಕ ಬೆಳೆವುದೊ;
ಇದುವೆ ನಮ್ಮಭಿಮಾನದಾ
ಕನಕ ವೈಭವ ಶಿಖರವು!
ಇದುವೆ ನಮ್ಮಾ ನಾಡಿದು!!

ತುಳುನಾಡ ಹುಡುಗಿ

ನೋಡನೋ! ನೋಡವಳ! ತುಳುನಾಡ ಹುಡುಗಿಯನು!
ಹಳ್ಳಿಗಾಡಿನ ಹುಡುಗಿ, ಹೊಲದೊಳೊಬ್ಬಳೆ ತಾನು
ತನ್ನೊಳಗೆ ಹಾಡುತ್ತ ಬೆಳೆಕೊಯ್ಯುತಿಹಳವಳು!
ಕೊಯ್ಯುವಳು ಬಯಲಿನಲಿ ಕಳವೆಯಾ ತೆನೆಗಳನು.
ಕೇಳವಳ ಹಾಡನ್ನು:
ನೋಡವಳ ಪಾಡನ್ನು.

ತೋರುವಳು, ತುಳುನಾಡ ಜಡತನದ
ಅಧಿದೇವಿ ಸಾಕಿ ಸಲಹಿದ ಮುದ್ದು
ಮಗಳಂತೆ: ಉಡುಗೆ ತೊಡುಗೆಯೊಳಿಲ್ಲ
ಕೃತಕ ಶೃಂಗಾರ ಬೆಡಗುಗಳೆಲ್ಲ;
ಇಟ್ಟಿಹಳು ಹಣೆಬೊಟ್ಟು;
ಕಟ್ಟಿಹಳು ತಲೆಜುಟ್ಟು:
ನೋಡವಳ ಮೈಕಟ್ಟು!!

ಕಪ್ಪಾಗಿ ತೋರುವಳು, ಮೈಯಲ್ಲಿ
ಥಳಕು ಹೊಳಪಿನ ಬಿಂಕ ಸೋಂಕಿಲ್ಲ;
ಹಾವಭಾವದಿ ಒನಪು ಒಯ್ಯಾರ
ದಾಟೋಪವಿನಿತಿಲ್ಲ. ಆದರೂ
ಮೋಹಿಸುವ ರೂಪ ಸೌಂದರ್ಯ ತೊರೆ
ದಿಲ್ಲವಳ ಕಣ್ಣು ಮೋರೆಗಳಲ್ಲಿ
ದಾಸ್ಯವನು ಸೆರೆಹಿಡಿದ ಸ್ವಾತಂತ್ರ್ಯ,

ಸ್ವಾವಲಂಬನ, ತೃಪ್ತಿ ಮೆರೆಯುತಿಪೆ.
ಕರುಣೆ, ಸ್ಮೈರಣೆ, ಮರುಕ, ಕನಿಕರ, ವಿ
ಶಾಲ ವಿಶ್ವಪ್ರೇಮ ಹರಿದಾಡು
ತಿಹುದವಳ ಅಂಗಾಂಗದೊಳಗೆಲ್ಲ;
ಹಾಡುವಳು ಹಳ್ಳಿಯಾ ಹಾಡೊಂದನವಳು.

ಕೇಳವಳ ಹಾಡನ್ನು;
ನೋಡವಳ ಪಾಡನ್ನು!
ಬಡತನದ ಜೀವನದಿ ಬೆಂದು, ಬೇಸತ್ತು, ಚಿರ
ಶಾಂತಿಯನು ಬಯಸಿ, ನದಿಯಲಿ ಮುಳುಗಿ
ಬಾಳುವೆಯ ಕಳೆದೋರ್ವ ಮಲೆನಾಡ
ಹೆಂಗುಸಿನ ದುಃಖರಸ ಒಸರುತಿಹ
ಕನಿಕರದ ಕಥೆಯೊಂದ ಹಾಡುವಳು!
ಪಯಣಿಗನೆ ನೀನಲ್ಲೆ
ನಿಲ್ಲಲ್ಲಿ ಬಯಲಲ್ಲಿ!
ಆಲಿಸಾ ಹಾಡನ್ನು!!

ಕೆಲದ ಗಿರಿ ತಪ್ಪಲಲಿ ಪ್ರತಿಧ್ವನಿಸು
ತಿಹುದವಳ ಪಾಡ್ತನದ ಆಲಾಪ.
ಹಾಡುತ್ತ ಕೊಯ್ಯುವಳು;
ಕೊಯ್ದಂತೆ ಹಾಡುವಳು;
ಕೊಯ್ದುದನು ಕೂಡಿಪಳು;

ಹಾಡುತ್ತ, ಹಾಡುತ್ತ ಕಥೆ ಮುಗಿದುಬಂದಂತೆ,
ನಿಟ್ಟುಸಿರ ಸೂಸುವಳು, ಕಣ್ಣೀರ ಸುರಿಸುವಳು:
ನೋಡದೋ! ನೋಡವಳು
ಸೆರಗಿಂದ ಒರಸಿದಳು
ಕಣ್ಣೀರ ಧಾರೆಯನು!!

ಅಲ್ಲಿ ಹೊಲದಲಿ ಗೇಯುತಿಹನವನು
ಅವಳಿನಿಯ: ಜೀವನದ ಸುಖದುಃಖ
ದೇಂಳಿತಗಳಿಗಿವರು ನಿತ್ಯ ಸಹಭಾಗಿಗಳು.
ಜೀವನದ ಹಂಬಲಕೆ,
ಸೋತವರ ಬೆಂಬಲಕೆ.
ಜಗದ ಕಲ್ಯಾಣಕ್ಕೆ
ಹಗಲಿರುಳು ಬೆವರಿಳಿಸಿ ದುಡಿದು ಗೇಯುವ ಕರ್ಮ
ಯೋಗಿಗಳು!
ತಮ್ಮ ದುಡಿತದಿ ವಿಶ್ವಕನ್ನ ಒದಗಿಪ ಮಹಾ
ತ್ಯಾಗಿಗಳು!!

ದೇಶಪ್ರೇಮವೆ ಭಕ್ತಿ, ಗೈಮೆಯೇ
ಈಶನಾರಾಧನೆಯು ಎಂದೆನುತ,
ಅನವರತ ಗೇಯುತಿಹ
ಸ್ವಾರ್ಥವಿಯೋಗಿಗಳಿವರು!!
ನೇಗಿಲ ಯೋಗಿಗಳಿವರು!!!

ಸುಖಿಯಾರು

ಅವನೆ ಸುಖಿ ಜಗದೊಳಗೆ—
ಯಾರ ಮನದಾಸೆ, ಬಡಬಡಿಕೆಗಳು,
ಬಯಕೆಗಳು, ಹಿಡಿಯೊಳಡಗಿರುವವೊ—

ನಾಳೆಗೇನೆಂತೆಂಬ
ಚಿಂತೆ ಇಲ್ಲದೆ ಇದ್ದು; ಇದ್ದದ್ದು
ಸಾಕೆಂಬ ತೃಪ್ತಿಯಿಂದಿಹನಾರೋ—

ತಾಯ್ನಾಡ ಹಳ್ಳಿಯಲಿ
ತನ್ನೂರ ಹೊಲಗದ್ದೆ
ಗಳನುತ್ತು ಬಿತ್ತಿ, ಗೇ
ಯುತ ದವಸ ಧಾನ್ಯಗಳ
ಬೆಳೆಯುತ್ತ, ಸಾಕಿ ದನ
ಕರುಗಳನು ಕೆನೆಹಾಲು
ಮೊಸರುಂಡು, ಅನ್ಯರಿಗೆ
ಅನ್ನವನು ಒದಗಿಸುತ,
ಗೌರವದಿ ತಲೆಯೆತ್ತಿ,
ಸ್ವಾಭಿಮಾನದಿ ಮೆರೆಯುತಿಹನಾರೊ—

ನೆಟ್ಟು ಮರಗಿಡಗಳನು,
ತೋಟದಲಿ ತಣ್ಣೆಳಲ
ಸೊಂಪಿನನುಭವ ಪಡೆದು,

ಕೋಗಿಲೆಯು ಕಿವಿಗಿಂಪು
ಸುರಿವ ಸಂಗೀತದಲಿ
ಮನಸೋತು, ಮೈಮರೆತು,
ಮಗಮಗಿಪ ಕುಸುಮಗಳ
ಕಂಪಿನಾ ಹೊಳೆಯಲ್ಲಿ
ಮಿಂದು, ರಸತುಂಬಿ ಜೀ
ಗುವ ಹಣ್ಣುಗಳ ತಿಂದು,
ಸಂತಸದ ಸುಗ್ಗಿಯಲಿ
ಕುಣಿದು ದಣಿಯುತ್ತಿರುವನಾರೊ—

ಜೀವನೀಳಿಸಿ ಗೆದ್ದು, ಸಂ
ತೃಪ್ತಿಯಲಿ ಆರೋಗ್ಯ
ಸಂಪದ ಮನಃಶಾಂತಿ
ಸೌಭಾಗ್ಯಗಳ ಗಳಿಸಿ,
ಸುಖನಿದ್ದೆಯಿಂದೆದ್ದು
ಹೊಲಗೆಲಸಗಳಗೈದು,
ಬಿಡು ಬಯಲಿನಲಿ ಸುಳಿವ
ಮೆಲ್ನಡೆಯ ತಂಗಾಳಿ
ಯಲೆಗಳಿಗೆ ಮೈಯೊಡ್ಡಿ,

ವ್ಯಾಯಾಮ ಸಂಕಥಾ
ಕಾವ್ಯ ಪ್ರಪಂಚದಲಿ
ವಿಹರಿಸಿ, ನಿಸರ್ಗದಮಿ
ತಾನಂದದಿಂದುಬ್ಬಿ,
ಸ್ವರ್ಗೀಯ ಸೌಂದರ್ಯ
ಸುಖ ಶಾಂತಿಗಳ ಸುಧಾ
ರಸ ಕುಡಿದು, ತಣಿದು,— ಮೊಲೆ
ಯುಂಡು ರಿಂಗಣ ಕುಣಿವ
ಎಳೆ ಕರುವಿನಂತಿರುವನಾರೋ—

ಸುಖಪಡುವ ಬಾರೆ

ಬಾರೆನ್ನ ಮನದನ್ನೆ
ಬಾರೆನ್ನ ಜೀವನದ ಬದುಕೆ.
ಬಾರೆನ್ನ ಬಾಳ್ಬಳ್ಳಿ
ಯೊಳಗರಳಿ ನಗುತಿರುವ ಹೂವೆ
ಬಾರೆನ್ನ ಸುಖ ಸರೋ
ವರದಿ ಪರಿಮಳಿಪ ತಾವರೆಯೆ
ಬಾರೆನ್ನ ವೈಯ್ಯಾರ
ದಾ ನವಿಲೆ ಚೆಲುವಿನರಗಿಳಿಯೆ
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಆ ವನದ ಬಳಿಯಲ್ಲಿ
ಬಳ್ಳಿಗಳ ಬಳಗ ಬಳಸಿರುವ
ಮಾಮರವು ಹೂ ಮಿಡಿಗ
ಳಂತಳೆದು ಸೊಬಗಿನಿಂ ಮೆರೆವ
ಹೂತೇರಿನಂತೆ ಪರಿ
ಶೋಭಿಸುತ್ತಿದೆ! ನೋಡು ಗೆಳತಿ;
ಅಲ್ಲಿ, ಆ ಮರದೆಡೆಗೆ
ಬಾರೆನ್ನ ವೈಭವದ ಸಿರಿಯೆ!
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಬಿಸಿಸ ಗೊಂದಲ ಚಿಂತೆ
ಗಳಿಗೆ ತೆರಪಿಲ್ಲ ನೋಡಲ್ಲಿ
ಥಳಥಳಿಪ ಬಾನಂಚು
ಭುವಿಯ ಚುಂಬಿಸುತಿರುವ ಸೊಬಗ;
ಅಲ್ಲಿ ಆ ಬಯಲಿನಲಿ
ಎಳೆಹುಲ್ಲ ಹಾಸಿನಲಿ ಕುಳಿತು
ಜಡತನದ ಜಡಬಡಿಕೆ
ಗಳ ತೊರೆದು, ಸುಖಪಡುವೊ ಬಾರೆ.
  ಸುಖಪಡುವ ಬಾ ನಲ್ಲೆ!
  ಸುಖಪಡುವ ಬಾರೆ!!

ಅಲ್ಲಿ ಕೋಗಿಲೆ ಮುದದಿ
ಮದವೇರಿ, ಇನಿಯಳೊಡಗೂಡಿ,
ಅನುರಾಗದಿಂದ ಸಂ
ಗೀತವನು ಹಾಡುತಿದೆ ನೋಡು;
ಗಾನ ಮಾಧುರ್ಯ, ಕಲ
ಕಂಠದಾಲಾಪದೊಡವೆರೆದು
ಸುರಿವ ಹೊಸ ಜೆಡಗಲ್ಲಿ
ಮೆರೆಯುತಿದೆ. ಸುಖಪಡುವೊ ಬಾರೆ
  ಸುಖಪಡುವ ಬಾ ನಲ್ಲೆ!
  ಸುಖಪಡುವ ಬಾರೆ!!

ನೆರೆದಿಹುದು ಸೃಷ್ಟಿಸೌಂ
ದರ್ಯ ಸಂಕುಲ ಸಕಲವಲ್ಲಿ;
ತಂಗಾಳಿ ಬೀಸುತಿದೆ;
ಭೃಂಗಾಳಿ ಝೇಂಕರಿಸುತಿಹುದು;
ಮರದಿ ಹೂ ಗೊಂಚಲಿನ
ಕೆಲದಿ, ಪೆಣ್ಗಿಳಿಯು ಬಳಿಸಾರ್ದು,
ಸರಸ ಸಲ್ಲಾಪದಿಂ
ದಿಹುದೊಂದು ಶುಕ, ನೋಡು ಗೆಳತಿ!
　　ಸುಖಪಡುವ ಬಾ ನಲ್ಲೆ!
　　ಸುಖಪಡುವ ಬಾರೆ!!

ಶಾಂತಿ, ವಿಶ್ರಾಂತಿ, ಸಂ
ತುಷ್ಟಿ, ನೆಲಸಿಹುದಲ್ಲಿ ಎಲ್ಲ;
ಸುಖದ ಸುಗ್ಗಿಯು ಪೂರ್ಣ
ತಾಂಡವದಿ ಕುಣಿದಾಡುತಿಹುದು;
ಅಲ್ಲಿ ತಿಳಿವಿನ ನೇಸ
ರನು ಮುಗಿಲು ಮುಸುಕಿಕೊಂಡಿಲ್ಲ;
ಕವಿದಿಲ್ಲ ಮಂಜು, ಬಗೆ
ಯೊಲುಮೆ ತಾವರೆ ಹೂವನಲ್ಲಿ.
　　ಸುಖಪಡುವ ಬಾ ನಲ್ಲೆ!
　　ಸುಖಪಡುವ ಬಾರೆ!!

ನಿನ್ನ ಮೊಗದಾವರೆಯು
ಲಾವಣ್ಯರಸ ಲಹರಿಯುನ್ನು,
ಕುಡಿಸಿಂಗಿಸೀ ಕಣ್ಗ
ಳಾನಂದ ದಾಹವನ್ನಲ್ಲಿ;
ನಿನ್ನೆದೆಯು ಪ್ರೇಮ ಪೀ
ಯೂಷ ಕಳಸದ ಧಾರೆ ಎರೆದು,
ತಣಿಸೆನ್ನ ಬೆಂದ ಮನ
ವನ್ನಲ್ಲಿ! ಸುಖಪಡುವೊ ಬಾರೆ.
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಆ ಮರದ ಬಳಿಯು ಕೊಳ
ದೊಳು ನೀರು ತುಳುಕುತಿದೆ ನೀರೆ!
ಕೊಳದೊಳಗೆ ಬಿರಿದ ಕೆಂ
ದಾವರೆಯು ನಗೆಯುಕ್ಕುತಿಹುದು!
ಹೂಬಿಸಿಲು, ಹೂಗಳನು
ಮುದ್ದಾಡಿ, ಕುಣಿದಾಡುತಿಹುದು:
ಸೌಂದರ್ಯ, ಸಂತೋಷ
ದಿಂದ ನಲಿದಾಡುತಿಹುದಲ್ಲಿ!
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಆ ಮರದ ಬಳಿಯಲ್ಲಿ
ಮಾಮರದ ತಣ್ನೆಳಲಿನಲ್ಲಿ
ಅರೆಗಳಿಗೆ ವಿಶ್ರಮಿಸಿ,
ಜೀವನದ ಬೇಸರವ ಮರೆತು;
ಬಗೆಯು ಬಯಕೆಯು ಕೊಳಲಿ
ನಿಂಚರವನೂದುವೆನು ಮುದದಿ;
ನಿನ್ನೊಲವಿನೊಂದು ಕವಿ
ತೆಯ ಹಾಡುವೆನು! ಕೇಳು ನಲ್ಲೆ
 ಸುಖಪಡುವ ಬಾ ನಲ್ಲೆ!
 ಸುಖಪಡುವ ಬಾರೆ!!

ಕಂಗೊಳಿಸುತಿವೆ ಕೆಂಪು,
ಹಳದಿ ಬಣ್ಣದ ಗೇರುಹಣ್ಣು:
ಹಣ್ಣಿನಲಿ ತುಂಬಿ ತನಿ
ರಸ ತುಳುಕುತಿದೆ; ಅದರ ಕೆಲದಿ
ಹೊಂಚುಹಾಕುತ, ಮೆಲ್ಲ
ಮೆಲ್ಲನೈತರುತಿರುವ ಗಿಳಿಯು
ನೋಡಿ ನೀನಲ್ಲಿ ನಗ
ಲಾಸು ಸಂತಸಬಡುವೆ ಕಾಂತೆ!
 ಸುಖಪಡುವ ಬಾ ನಲ್ಲೆ!
 ಸುಖಪಡುವ ಬಾರೆ!!

ಮಂದಮಾರುತನಲ್ಲಿ
ವನಕುಸುಮದೊಡನಾಡಿ, ಸುಲಿದ
ಪರಿಮಳದ ಹೊರೆಯ ಹೊರು
ವಸು ನೋಡು! ಬಸವಳಿದು ಬಳಲಿ;
ವನಕುಸುಮ ರಸ ಕುಡಿದು,
ಜೀವನದಿ ಮತ್ಸರವ ಮರೆತು
ಒಮ್ಮೆಯಿಂ ಬಾಳುವಾ
ಭ್ರಮರ ಸಂಕುಲ ಮೆರೆವುದಲ್ಲಿ.
   ಸುಖಪಡುವ ಬಾ ನಲ್ಲೆ!
   ಸುಖಪಡುವ ಬಾರೆ!!

ಅಲ್ಲಿ ಸಾಲಿಗರಿಲ್ಲ,
ಸಾಲ ಮೂಲದ ಗೊಡವೆ ಇಲ್ಲ;
ಬಡವರೇಳ್ಗೆಯ ನೋಡಿ
ಸಹಿಸದಿಹ ಸಿರಿವಂತರಿಲ್ಲ;
ಸೋತವರ ತಲೆಗೆ ಕ
ಲ್ಲಿಡುವ ಯೋಜನೆಗೈವ ನಾಡ
ಹುಲಿಜಾತಿ ಅಲ್ಲಿಲ್ಲ;
ಬಾರಲ್ಲಿ! ಸುಖಪಡುವೊ ಬಾರೆ!!
   ಸುಖಪಡುವ ಬಾ ನಲ್ಲೆ!
   ಸುಖಪಡುವ ಬಾರೆ!!

ತಗ್ಗಿದವರನು ಬಗ್ಗಿ
ಸುವ ಪೂರ್ವಜನರ ಹಂಗಿಲ್ಲ,
ಪರರೇಳ್ಗೆಯನು ಕಂಡು
ಮನದಿ ಮತ್ಸರಪಡುವರಿಲ್ಲ;
ಪಥಿತರನು ಹೀನರೆಂ
ದೆನುತ ನಿಂದಿಸಿ, ಗಳಿವುತವರ
ಕಡೆಗೊತ್ತುತಿರುವಸೂ
ಯಾಪರರ ಸುಳಿವಿಲ್ಲ—ಅಲ್ಲಿ.
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಆ ಕೊಳದ ಹೊಸ ತಾವ
ರೆಯ ಮಧುರ ಮಧು ಕುಡಿದು ಕುಣಿದು,
ಎಲರಂಚಿನುಯ್ಯಲೆಯೊ
ಳೋಲಾಡುವಾರಡಿಯು ತೆರದಿ
ನಿನ್ನ ಮೊಗದಾವರೆಯು
ಚುಂಬನದ ರಸಪೇರ್ದು ತಣಿದು,
ಆನಂದ ಲಹರಿಯಲಿ
ಮನವ ತೇಲಿಸಿ ಸಲಿವೆ ತರುಣಿ.
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಕರೆಕರೆಯು ಕರಗಸದ
ಹರಿವ ಬಾಯಿಗೆ ಸಿಲುಕಿ ಸಿಗಿದು,
ಕಡು ಬೇಸೆಯಿಂದ ಸಿರಿ
ಪಿರಿಗೊಂಡ ನನ್ನೆದೆಯುಸೊವ್ಮೆ
ಬಿಚ್ಚುವೆಸು ತಂಗಾಳಿ
ಯಲೆದಾಡುವಾ ನೆಳಲಿನಲ್ಲಿ;
ನಿನ್ನ ಪ್ರೇಮಾಮೃತದ
ಧಾರೆಯಿಂ ತಣಿಸದನು ನಲ್ಲೆ!
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಅನವರತ ಕಾಡುತಿಹ
ಬಡತನದ ಕರೆಕರೆಯ ಹಳಯು
ಜೊಂತೆಯನು ಬಿಸುಟು, ಹೊಸ
ಹುರುಪಿನೊಸಗೆಯ ತೊಡುಗೆ ತೊಟ್ಟು;
ನಿನ್ನ ಕೆಲದಲಿ ಕುಳಿತು
ಮೈಯುಬ್ಬಿ ತಬ್ಬಿ ಮುದ್ದಿಡಲು,
ಮನದಾಸೆ ಬಳ್ಳಿ ಹೊಸ
ಹೂ ಬಿಡುವ ಬೆಡಗ ನೋಡಾಗ
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಕವಿಯು ಕನಸಿನ ಸುಖದ
ಸಾಮ್ರಾಜ್ಯದಲ್ಲಿ ಸಂಚರಿಸಿ,
ಅರೆಗಳಿಗೆ ಈ ಪ್ರಪಂ
ಚವ ಮರೆತು ಸುಖಪಡುವ ಬಾರೆ.
ಮನದ ಪಂಜರದೊಳಗೆ
ಹಾತೊರೆಯುತಿದೆ ಆಸೆ ಹಕ್ಕಿ,
ಹೃದಯ ಗಗನ ವಿಶಾಲ
ವಿದೆ ಹಾರಿ ಸುಖಪಡುವೊ ಬಾರೆ.
ಸುಖಪಡುವ ಬಾ ನಲ್ಲೆ!
ಸುಖಪಡುವ ಬಾರೆ!!

ಪ್ರಾರ್ಥನೆ

ಸಕಲಕೆ ನೀನೇ ಕಾರಣ ದೇವೀ;
ವಿಶ್ವದೊಳೆಲ್ಲಾ ಎರಚಿಹೆ ಮಾಯಾ.

ಆಶೆ ನಿರಾಶೆ, ಜಯಾಪಜಯಂಗಳ
ಭಾರದಿ ಹಿಗ್ಗಿದೆ,
ತಗ್ಗಿದೆ, ಕುಗ್ಗಿದೆ.
ಪರಿಪರಿ ಕಷ್ಟದ ಬೇಗೆಗೆ ಬೆಂದು,
ಕಂದಿದೆ, ಕುಂದಿದೆ,
ಕೊರಗಿದೆ, ಸೊರಗಿದೆ;

ಜೀವನ ಘನ ಕಾಂತಾರದೊಳೋರ್ವನೆ
ಸಿಲುಕುತ ದಿಗ್ಭ್ರಮೆ
ಗೊಂಡಿಹೆ! ಜನನಿಯೆ!
ಅನುಪಮ ಕರುಣಾಸಾಗರೆ! ನೀ ಪೊರೆ
ದೀನನ ಮೊರೆಯನು
ಲಾಲಿಸು ತಾಯೇ.

ನಿರ್ಮಲಗೊಳಿಸಿಹೆ ಹೃದಯಕುಟೀರ:
ನಿನಗಿದು, ನಿನ್ನದು,
ನಿನ್ನದೆ ಮಾತೇ!
ಭಕ್ತಿಯು ನೀನೆ, ಮುಕ್ತಿಯು ನೀನೆ,
ಶಕ್ತಿಯು ನೀನೆ;
ಭಗವತಿ ತಾಯೆ!!

ಬರಗಾಲ ಭೈರವ

ಕೇಳದೋ ಕೇಳಲ್ಲಿ!
ಬರಗಾಲ ಭೈರವನ
ಅಬ್ಬರದ ಗರ್ಜನೆಯು
ಹೂಂಕಾರ;
ಕರಕರನೆ ಹಲ್ಕಡಿವ
ರೇಂಕಾರ!

ಭೂತ ಹೆಜ್ಜೆಯನಿಡುತ,
ಮತಿಗೆಟ್ಟು, ಗತಿಗೆಟ್ಟು,
ಮೈಮರೆದು ಚಕ್ರನಾ
ಟ್ಯದಿ ಕುಣಿದು,
ಅಬ್ಬರಿಸಿ ಬೊಬ್ಬಿಡುತ
ಬರುತಿಹನು!

ಕೆಂಗಣ್ಣು ಕೆರಳಿಸುತ
ವಿಶ್ವವನೆ ನುಂಗಲೆನೆ,
ಮುಡಿ ಕೆದರಿ ರುದ್ರಾವ
ತಾರದಲಿ
ಬಂದನಿದೊ, ಬರಗಾಲ
ಭೈರವನು!

ಎದೆಯೊಡೆದು ಬಿಸಿ ನೆತ್ತ
ರನೆ ಕುಡಿದು, ಸಿಡುಕಿನಲಿ
ರುಂಡವನು ಚೆಂಡಾಡಿ,
ಬಂದನಿದೊ
ಬಡವರನು ಸದೆಬಡಿವ
ಕೇಡಿಗನು.

ಹೊಲದ ಬೆಳೆಯನು ಕೆಡಿಸಿ,
ಕೆರೆ ತೊರೆಯ ನೀರ್ಕುಡಿದು,
ಮರಿಮಕ್ಕಳನು ಕೊಲ್ವ
ನಿರ್ದಯನು
ಬಂದನಿದೊ, ಬರಗಾಲ
ಭೈರವನು!

ಸೊಂಪಾಗಿ ಬೆಳೆದ ಪೈ
ರಿನ ಹೊಲಕೆ, ಮದಬಂದ
ಕಾಡಾನೆ ಹೊಕ್ಕಂತೆ,
ಲೋಕವನೆ
ಬಳಲಿಸುತ, ಕೊರಗಿಸುತ,
ಬಂದನಿದೊ!

ಭೀಕರ ಸ್ವರೂಪದಲಿ
ಪ್ರಳಯ ತಾಂಡವನಂತೆ,
ಲೋಕವನೆ ನಡುಗಿಸುತ,
ಮರುಗಿಸುತ,
ಬಂದನಿದೊ, ಬರಗಾಲ
ಭೈರವನು!!!

ಕೋಗಿಲೆ

ಕೇಳಿದೆ ಕೋಗಿಲೆ ನಿನ್ನಯ ಹಾಡನು,
ಮನ ಮರುಳಾಯಿತು;
ಹೃದಯವು ಬ್ರಹ್ಮಾನಂದದಿ ಕುಣಿಯಿತು!
ಹಕ್ಕಿಯೊ ನೀ ಸಂಗೀತದ ಬುಗ್ಗೆಯೊ!
ತಿಳಿಯದೆ ಗಲಿಬಿಲಿಗೊಂಡಿಹೆ ಮನದಲಿ:
ಹಾಡೋ ಕೋಗಿಲೆ!!

ಹಾಡಿನ ಹಕ್ಕಿಯೆ, ಉದಯದಿ ತೋಟದ
ಬಳಿಯಲಿ ಹಾಡಿದೆ;
ಮರಗಳ ಮರೆಯಲಿ ಹಾಡುತ ಹಾರುವ
ಬೆಡಗನು ನೋಡಿದೆ! ಪಕ್ಕದ ಗುಡ್ಡದ
ತಪ್ಪಲು, ರಾಗಾಲಾಪದ ಪ್ರತಿಧ್ವನಿ
ಕೊಡುವುದ ಕೇಳಿದೆ.

ಎಳೆಬಿಸಿಲಿನ ಹೊಳೆಯಲಿ, ನಲಿದಾಡುತ
ತೇಲುತ, ಕೋಮಲ
ಹೂಗಳ ಎಸಳಿಂದೆಸಳಿಗೆ ಹರಿಯುತ
ಅಡಗುವ ನಿನ್ನಾ ಅನುಪಮ ಗಾನದ
ತರಳತರಂಗದ ಬೆಡಗನು ಕೇಳಿದೆ!
ಸುಂದರ ಕೋಗಿಲೆ!!

ಕೇಳುತ ಕೇಳುತ ಮನಸನೆ ನಿಮಿಷದಿ
ಶಾಂತಿಯು ಕನಸಿನ
ರಾಜ್ಯದ ಮೇರೆಯ ಮೀರುತ ಹಾರಿತು!
ಪಕ್ಷಿಯೊ ನೀನಾನಂದದ ಒರತೆಯೊ!
ಅರಿಯದೆ ತಳಮಳಗೊಂಡಿಹೆ ಕೋಗಿಲೆ!!
ಹಾಡೋ ಕೋಗಿಲೆ!

ಚಿಕ್ಕವನಾಗಿರೆ, ಬಯಲಲಿ ಗೆಳೆಯರ
ಕೂಡುತ ಆಡುತ,
ಓಡುವ ಸಮಯದಿ ಕೇಳಿದ ಸುಖಮಯ
ಮೋಹನ ಹಾಡಿದು! ಅದುವೇ ಹಾಡಿದು!!
ಹಾಡೆಲೆ ಕೋಗಿಲೆ! ಅಂದಿನ ಹಾಗೆಯೆ
ಇಂದೂ ಕುಣಿಯುವೆ!!


ಸುಲಲಿತ ರಾಗದ ಸೋನೆಯ ಕುಡಿಯುತ,
ಆ ಕಡೆ ಈ ಕಡೆ
ಕಣ್ಣಿನ ನೋಟವ ಹಾರಿಸಿ, ಪೊದರನು,
ಮರವನು, ಬಾನನು, ಇಣುಕುತ ಹುಡುಕಿಸಿ
ಬಳಲಿಸಿ ದಣಿಸಿದ ಸೊಬಗಿನ ಹಾಡಿದು!
ಅದುವೇ ಹಾಡಿದು!!

ಸಂತಸದಿಂದ ವಸಂತದಿ ಮೆರೆಯುವ,
ವೈಭವವನು ಮನ
ಗಾಣುತ ಸರಸರ ಉಕ್ಕುತ ಹರಿಯುವ
ಪ್ರತಿಭಾ ಸ್ಫೂರ್ತಿಯ ತಡೆಯಲ್ಕಾರದೆ,
ಸರಸ ಸುಲಕ್ಷಣ ಕವನವ ಹಾಡುವ
ಆಶು ಕವೀಂದ್ರನೆ!!

ಗಾಯನ ದೇವಿಯು, ಕಾವ್ಯದ ರಸವನೆ
ಕುಡಿಸುತ, ಬೆಳೆಸಿದ
ಮೋಹದ ಮಗು ನೀ ಸುಂದರ ಕೋಗಿಲೆ!
ಹಾಡೀ ಬಡವನ ಗುಡಿಸಲ ಪಕ್ಕದ
ಮಾವಿನ ಮರದಲಿ! ಮೋಹನ ರಾಗವ
ಹಾಡೆಲೆ ಹಕ್ಕಿಯೆ!!

ಹಾಡುತ ಬಡವಗೆ ಸ್ವರ್ಗದ ಸುಖಗಳ
ನೆರಳಿನ ಕನಸನು
ಕಾಣಿಸಿ, ಬಾಳಿನ ಕರೆಕರೆಗಳನರೆ
ಗಳಿಗೆಗೆ ಮರೆಯಿಸೊ!
ಹಾಡುವ
ಹಕ್ಕಿಯೆ!!

ಕಾರ್ಕಳದ ಗೋಮಟೇಶ.



ನಿರ್ಮೋಹ ಶಾಂತಮುಖ
ಮುದ್ರೆಯಿಂದೊಪ್ಪುತಿಹ!
ಗೋಮಟೇಶಾ!!

ಗೋಮಟೇಶ್ವರ

ಚಿಕ್ಕಿ, ಬಾಳಿಗಿಟ್ಟ
ಗೋಚರ್ಸ್ಯ ಚಿತ್ರವೋ
ಹಿಡಿದೋಳು ಶಾಂತಿಸ್ವರೂಪ
ಮುದ್ರೆಯಿಂದೆಸಿಷ್ಟು ಕಿಸಿ!
ಬಯಲನು ಬಾಳು ನಿಂ
ದಿರ ಮುನೀಶರ ಮಾಡಿಗೆ
ಗೋಮಟೇಶರ!!

ಹೇಗೆ ಕೆತ್ತಿದೆ ಶಿಲ್ಪಿ
ಆ ಭಾವ ಆ ಭಾಷ್ಯ
ದತ್ತಿಗುಣಗಳನೆಲ್ಲ!
ವ್ಯಕ್ತ ಪಡಿಸಿದೆ ಹೇಗೆ!
ಶಾನ ಕಗ್ಗಲ್ಲಿನಿಂದ
ಎಲೆ ಬಾಳೆ ಬಂದಾಯಿತ್ತು
ಹೇ ಶಿಲ್ಪಿಯೇ!

ಕಾರ್ಕಳದ ಗೊಮ್ಮಟೇಶ.



ನಿರ್ವಾಣದ ಶಾಂತಮುಖ
ಮುಂದೆ ಯಿಂದೆತ್ತು ತಿಸೆ'
ಗೊಮ್ಮಟೇಶಾ||

ಗೋಮಟೇಶ್ವರ

ಅಲ್ಲಿ, ಕಾರ್ಕಳದಲ್ಲಿ
ಗೋರ್ಕಲ್ಲ ನೆತ್ತಿಯಲಿ
ನಿರ್ಮೋಹ ಶಾಂತಮುಖ
ಮುದ್ರೆಯಿಂದೊಪ್ಪುತಿಹೆ!
ಆಜಾನು ಬಾಹು ಸುಂ
ದರ ಮನೋಹರ ಮೂರ್ತಿ
ಗೋಮಟೇಶಾ!!

ಹೇಗೆ ಕೆತ್ತಿದೆ ಶಿಲ್ಪಿ
ಆ ಭಾವ ಆ ಭವ್ಯ
ಭಕ್ತಿಗುಣಗಳನೆಲ್ಲ!
ವ್ಯಕ್ತ ಪಡಿಸಿದೆ ಹೇಗೆ!!
ಕಠಿಣ ಕಗ್ಗಲ್ಲದೇಂ
ಎಳೆ ಬಾಳೆ ದಿಂಡಾಯ್ತೊ
ಹೇ ಶಿಲ್ಪಿಯೇ!

ಆ ಧ್ಯಾನ! ಆ ಮೌನ!
ಆ ಸಮಾಧಿಯಭಾವ!
ಕಣ್ಮುಚ್ಚಿ ಏಕಾಗ್ರ
ತೆಗೆ ಸಂದ ಗಾಂಭೀರ್ಯ!
ಕೆತ್ತಿದವ ನೀನಾರು
ಶಿಲ್ಪಿಯೋ! ರಸಋಷಿಯೊ!
ನಾನರಿಯೆನು!

ಅದೆಂತು ನಿಲಿಸಿದರೊ
ಈ ಅದ್ಭುತಾಕಾರ
ಮೂರ್ತಿಯನು! ವಿಮಲತೆಯ
ಸರಳತೆಯ ಮುಖಭಾವ
ದಲಿ ಹೇಗೆ ತುಂಬಿಸಿದೆ
ಬಿಂಬಿಸಿದೆ! ಹೇ ಶಿಲ್ಪಿ
ವಿಸ್ಮಯವಿದು!!

ಬದುಕು ಬಯಕೆಗಳೆಲ್ಲ
ಆಗಸದ ಹೂವೆಂದು,
ನಿಂದು ಧ್ಯಾನಕೆ ಸಂದ
ವೈರಾಗ್ಯ ವೈಖರಿಯ
ಭಾವ ರೇಖೆಗಳಿಂದ
ಬಿಂಬಿಸಿದ ಪರಿಯೆಂತು!
ಹೇ ಶಿಲ್ಪಿಯೇ!

ಇಹ ಜೀವನಕೆ ಹೇಸಿ,
ಮುಕ್ತಿಯಲಿ ಮನನೆಟ್ಟ
ಘನ ಭಾವನೆಯು ಮುಖದ
ಭಂಗಿಯೊಳೆ ಒಡೆದು ಕಾ
ಣುತ್ತಿಹುದು! ಬಾಹುಬಲಿ
ಗೋಮಟೇಶಾ!

ಆಸೆಯುಸು ತೊರೆದು, ಕ
ಣ್ಮುಚ್ಚಿ ಏಕಾಂತ ವಾ
ಸದೊಳಾತ್ಮ ವಿಜ್ಞಾನ
ಸಾಧನೆಗೆ ನಿಂದು ತಪ
ಗೈವ ಜಿನಯೋಗೀಶ!
ವರ ದಿಗಂಬರ ಪುರುಷ!
ಗೋಮಟೇಶಾ!

ಏನನೆಸಗಿಹೆ ಶಿಲ್ಪಿ!
ಕಲ್ಲಿನಲಿ ಚಿರಭಕ್ತಿ
ಶಾಂತಗುಣಗಳ ತುಂಬಿ
ತುಳುಕಿಸಿಹೆ! ನೀರಸ ಪ
ದಾರ್ಥದಲಿ ರಸಹಿಂಡಿ
ತೋರಿಸಿಹೆ! ರಸಯೋಗಿ
ಹೇ ಶಿಲ್ಪಿಯೇ!

ಸುಂದರಿಗೆ

ಸುಂದರಿಯೆ! ಈ ನಿನ್ನ ನಕ್ಷತ್ರ
ನಯನಗಳ ಸೌಂದರ್ಯದತಿಶಯಕೆ
ಮನಮೆಚ್ಚಿ ಹೆಮ್ಮೆಪಡದಿರು ಬಾಲೆ!!
ನೋಟಕರ ಮನಸುಗಳ ಸೆರೆಹಿಡಿದು,
ಹೃದಯವನೆ ಸೂರೆಗೊಳ್ಳುವೆನೆಂದು
ನಿನ್ನಲ್ಲೆ ಹಿಗ್ಗದಿರು ನೀ ಚೆನ್ನೆ!
ಸುಳಿಗುರುಳು, ಪೆರೆನೊಸಲು, ಭ್ರಮರಕಂ
ತಲ ಧಾಮದಿಂದ ಸುಂದರಿಯೆಂದು,
ಉಬ್ಬಿ ಹಿರಿದಾಗದಿರು ಲಲಿತಾಂಗಿ!
ಉಳಿಯದಿದು; ಸದ್ಗುಣವೆ ಸೌಂದರ್ಯ!!

ತೃಪ್ತಿ ಸರ್ವಸ್ವವಾಗಿದೆ ಎನಗೆ

ಎನ್ನ ಮನವೇ ಎನ್ನ ಸಾಮ್ರಾಜ್ಯ.
ಭುವಿಯ ಸುಖ ಸಂತೋಷಗಳನೆಲ್ಲ
ಮಿಗಿಸಿ ಮೆರೆವಾನಂದ
ಇಹುದಲ್ಲಿ;
ಮನದಲ್ಲಿ.

ಬೇಕಿನ್ನು, ಬೇಕಾದುದೆಲ್ಲ ಬೇಕೆನಿಸಿದರು:
ಅತಿಯಾಸೆಯಿಂದ ಮನ
ಹಾತೊರೆದು
ಯಾಚಿಸದು.

ರಾಜ ವೈಭವವಿಲ್ಲ;
ಧನಕನಕಗಳ ರಾಶಿ ಇಲ್ಲ;
ಆನೆ ಸೇನೆಗಳಿಲ್ಲ, ಬಲವಿಲ್ಲ;
ಮೋಹಿಸುವ ಕಣ್ಗಳಿಗೆ
ಸುಖವೀವ ಸೌಂದರ್ಯವಿಲ್ಲ.
ಏನಿಲ್ಲದಿದ್ದರೂ ದೊರೆ ನಾನು!
ಇಲ್ಲವೆಂಬುವ ಚಿಂತೆ ಎನಗಿಲ್ಲ;
ಮನಸಿನೊಳಗಿದೆಯೆಲ್ಲ,
ಬೇಕೆಂಬುದನು ಮನಸೆ
ಒದಗಿಸುತ್ತಿದೆ ಎನಗೆ!

ತೃಪ್ತಿ ಸರ್ವಸ್ವವಾಗಿದೆ ಎನಗೆ:
ಅತಿಯಾಸೆ ಸೋಂಕಿಲ್ಲ,
ಅಧಿಕಾರದಲ್ಲಿ ಬಯಕೆಯೆ ಇಲ್ಲ:
ಬೇಕಾದುದೆಲ್ಲ ಮನದಲ್ಲಿಹುದು.
ಮನದ ಸಂತೃಪ್ತಿಯೊಳೆ ಸುಖಪಟ್ಟು
ಅರಸನಂದದಿ ಮೆರೆವ ಸುಖಿ ನಾನು!
ಕೆಲವರಲಿ ಬೇಕಾದುದಿದೆ ಎಲ್ಲ,
ಬೇಕೆಂದು ಹಂಬಲಿಸುತಿಹರಿನ್ನು:
ಎನ್ನೊಳಿಹುದತ್ಯಲ್ಪ,
ತೃಪ್ತಿಯಿದೆ; ಎನಗಿನ್ನು
ಬೇಕೆಂಬ ಆಸೆ ಹರಿಯುವುದಿಲ್ಲ.

ಬಹಳವಿದ್ದವರೆಲ್ಲ
ಕಡು ಬಡವರಾಗಿಹರು.
ಸ್ವಲ್ಪವಿದ್ದರು ನಾನೆ ಸಿರಿವಂತ;
ಅವರು ಬಡವರು,
ನಾನು ಸಿರಿವಂತ!

ಇದ್ದು ಬೇಡುವ ದೀನ ಜನರವರು:
ಇದ್ದುದನು ಕೊಡುವ ದಾನಿಯು ನಾನು!
ಅವರು ಕಡು ಲೋಭಿಗಳು,
ನಿತ್ಯ ಸಂತಾಪಿಗಳು;
ಉದಾರಿಯಾಗಿಹೆ ನಾನು,
ವಿಶಾಲ ಹೃದಯನು,
ನಿತ್ಯ ಸಂತೋಷಿ!

ಇದ್ದುದವರಿಗೆ ಕಡಿಮೆಯೆನಿಸುತಿದೆ;
ಸಾಕೆನಿಸುತಿದೆ ಎನಗೆ!
ಹೊರಳಾಡುತಿಹರವರು ದುಃಖದಲಿ;
ಜೀವನದಿ ಹರುಷದಿಂ
ಬಾಳಿ ಮೆರೆಯುವ ನಿತ್ಯ ಸುಖಿ ನಾನು!!

ಬೇಡಿಕೆ

ಹೇ ದೇವ! ನೀನೆನ್ನ ಜೀವನದ
ತೊಡರೆಡರು ಕಷ್ಟಗಳ ಪರಿಹರಿಸಿ,
ದುಃಖವನು ತೊಲಗಿಸುತ, ಸುಖವನೀ
ಪೆಂದು ನಾಂ ನಿನ್ನ ಬೇಡುವುದಿಲ್ಲವಯ್ಯ;
ಅವುಗಳನು ಧೈರ್ಯದಿಂದೆದೆಗೊಟ್ಟು
ಎದುರಿಸುತ ಸಹಿಸುವಾ ಶಕ್ತಿಯನು
ಕರುಣಿಸೆನಗೆಂದೆನುತ, ದೈನ್ಯದಿಂ
ಪ್ರಾರ್ಥಿಸುವೆ ನಿನ್ನಡಿಯೊಳತಿ ಭಕ್ತಿಯಿಂದ.

ಜೀವನದ ರಣರಂಗದೊಳಗೆನ್ನ
ಬೆಂಬಲಕೆ ಕೂಡಿಗರನೊದಗಿಸೆಂ
ದೆನುತ, ನಿನ್ನಡಿವಿಡಿದು ನಾಂ ಬೇಡಿ
ಕೊಳಲಾರೆ; ಜೀವನದ ಹೋರಾಟದಲ್ಲಿ
ಹಿಂಜರಿಯದಂತೆನಗೆ ನೀನೊಲವಿ
ನಿಂದಾತ್ಮ ಶಕ್ತಿಯನು ಕೊಟ್ಟು, ಕೃಪೆ
ದೋರಬೇಕೆಂದು ಶಿರಗೊಡ್ಡಿ, ಶಿರ
ಬಾಗಿ, ಬೇಡುವೆ ಚರಣ ತಲದಿ ಸದ್ಗುರುವೆ.

ಮನ ಬಯಸುತಿರುವ ಸುಖ ಸಂಪದವ
ನೀಡೆಂದು ನಾನಾಸೆಯಿಂದ ಬೇ
ಡುವುದಿಲ್ಲ! ಕೊಡಲು ನಿನ್ನೊಳಗಿರುವು
ದೇನು! ಅದನೆಲ್ಲ ನಾಂ ಬಲ್ಲೆ ಗುರು
ದೇವ! ನೀನೆನಗೆ ಸನ್ಮತಿ ಇತ್ತು
ಸೋಲ ಗೆಲವಿನೊಳೊಂದೆ ತೆರದಿಂದ
ನಿನ್ನ ನಾಂ ನೆನವಂತೆ ವರವೀಯೊ ಸದಯಾ!!
